# ಪೌಲನು ಕೊಲೊಸ್ಸೆಯವರಿಗೆ ಬರೆದ ಪತ್ರಿಕೆ

**ಗ್ರಂಥಕರ್ತ:**

ಕರ್ತನಾದ ಯೇಸು ಕ್ರಿಸ್ತನ ಅಪೊಸ್ತಲನಾದ ಪೌಲನು.

**ದಿನಾಂಕ:**

ಕ್ರಿ.ಶ. 60 ರ ಸುಮಾರಿನಲ್ಲಿ.

**ಧ್ಯೇಯಗಳು:**

ಪೌಲನು ಯೇಸು ಕ್ರಿಸ್ತನ ಸುವಾರ್ತೆಯನ್ನು ಸಾರಿದ್ದರ ನಿಮಿತ್ತ ಹಿಂಸೆಗಳನ್ನು ಅನುಭವಿಸಿದವನಾಗಿ, ಸೆರೆಮನೆಯಲ್ಲಿದ್ದಾನೆ. ಆದರೂ ಅವನು ತನ್ನ ಸ್ವಂತ ಕಷ್ಟಗಳ ಬಗ್ಗೆ ಯೋಚಿಸುವವನಾಗಿರದೆ, ಸಹಜವಾಗಿಯೇ ತನ್ನ ಮನಸ್ಸು ಹಾಗೂ ಹೃದಯವನ್ನು ಯೇಸು ಕ್ರಿಸ್ತನು ಹಾಗೂ ಯೇಸು ಕ್ರಿಸ್ತನ ಜನರ ಮೇಲೆ ಕೇಂದ್ರೀಕರಿಸಿದ್ದಾನೆ. ಅವನು ಕೊಲೊಸ್ಸೆಗೆ ಹೋಗಿಯೇ ಇರಲಿಲ್ಲ ಆದರೂ ಅಲ್ಲಿದ್ದ ಸಭೆಯ ಪರಿಸ್ಥಿತಿಯನ್ನು ಬಲ್ಲವನಾಗಿದ್ದನು, ಆದ್ದರಿಂದಲ ಅವರನ್ನು ಪ್ರೋತ್ಸಾಹಪಡಿಸಲು, ಅವರಿಗೆ ಯೇಸು ಕ್ರಿಸ್ತನನ್ನು ಪೂರ್ತಿಯಾಗಿ ಪರಿಚಯ ಮಾಡಿಸಲು ಹಾಗೂ ಆತನು ವಿಶ್ವಾಸಿಗಳಿಗೆ ಏನು ಮಾಡಿದ್ದಾನೆ ಎಂದು ತೋರಿಸಲು ಈ ಪತ್ರಿಕೆಯನ್ನು ಬರೆದಿದ್ದಾನೆ. ಅವನ ಮುಖ್ಯ ಧ್ಯೇಯ ಯೇಸು ಕ್ರಿಸ್ತನ ಪ್ರಾಮುಖ್ಯತೆ ಮತ್ತು ಹಿರಿಮೆ ಹಾಗೂ ಆತನಲ್ಲಿ ವಿಶ್ವಾಸಿಯ ಪೂರ್ಣತೆ ಮತ್ತು ಸಂಪೂರ್ಣತೆಯಾಗಿದೆ. ಕೆಲವು ಸುಳ್ಳು ಬೋಧಕರು ಕೊಲೊಸ್ಸೆಗೆ ಹೋಗಿದ್ದರು, ತಾವು ಬಹಳ ಬುದ್ಧಿವಂತರ ಹಾಗೆ ನಡೆದುಕೊಂಡಿದ್ದರು, ಯೇಸು ಕ್ರಿಸ್ತನ ಸತ್ಯಕ್ಕೆ ವಿರುದ್ಧವಾದ ಕೆಲವು ತತ್ವಾನುಸಾರವಾದ ಅರ್ಥವಿಲ್ಲದ ಮಾತುಗಳು ಹಾಗೂ ಸಿದ್ಧಾಂತಗಳನ್ನು ಕಲಿಸಿದ್ದರು ಮತ್ತು ಸುವಾರ್ತೆಯನ್ನು ವಕ್ರವಾಗಿಸಲು ಪ್ರಯತ್ನಿಸಿದ್ದರು. ತಾವು ಕಲಿಸುತ್ತಿರುವ "ಜ್ಞಾನವು" ರಕ್ಷಣೆಗೆ ಅವಶ್ಯವಾಗಿದೆ, ಯೇಸು ಕ್ರಿಸ್ತನು ದೇವರು ಅಥವಾ ಲೋಕದ ರಕ್ಷಕನಲ್ಲ, ದೇವರು ಮತ್ತು ಮಾನವರ ನಡುವೆ ಮಧ್ಯವರ್ತಿಗಳಾಗಿ ಅನೇಕ ದೇವದೂತರು ಹಾಗೂ ಆತ್ಮೀಕ ಜೀವಿಗಳು ಇದ್ದಾರೆ, ಯೇಸು ಕ್ರಿಸ್ತನು ಅವರಲ್ಲಿ ಒಬ್ಬನು, ದೇವದೂತರನ್ನು ಆರಾಧಿಸುವದು ಮತ್ತು ದೇಹದ ಮೇಲೆ ಘೋರವಾದ ಕಠೋರವಾದ ಕಾರ್ಯಗಳನ್ನು ಮಾಡಿಕೊಳ್ಳುವದು ಒಳ್ಳೆಯ ಕಾರ್ಯಗಳು ಎಂದು ಕಲಿಸುತ್ತಾ ಇದ್ದರು. ಅವರ ಸುಳ್ಳು ಬೋಧನೆಗಳನ್ನು ವಿರೋಧಿಸುತ್ತಾ, ಯೇಸು ಕ್ರಿಸ್ತನು ಮಾನವರಿಗಾಗಿ ಖರೀದಿಸಿರುವ ಸಂಪೂರ್ಣ ವಿಮೋಚನೆ ಮತ್ತು ರಕ್ಷಣೆ (1:13-14,20), ಯೇಸು ಕ್ರಿಸ್ತನ ಪೂರ್ಣ ದೈವೀಕತ್ವ (1:15-19), ಮತ್ತು ವಿಶ್ವಾಸಿಗಳಿಗೆ ಯೇಸು ಕ್ರಿಸ್ತನಲ್ಲಿ ದೊರೆಯುವ ಸಂಪೂರ್ಣವಾದ ಜ್ಞಾನದ (2:3) ಬಗ್ಗೆ ಬರೆದಿದ್ದಾನೆ.

2:8-10 ಕೆಲವು ಪ್ರಮುಖವಾದ ವಚನಗಳಾಗಿವೆ.

# 1 1

**1:1** *"ಅಪೊಸ್ತಲನು"*– ರೋಮಾ 1:1; ಗಲಾ 1:1.

*"ತಿಮೊಥೆಯನು"*– ಫಿಲಿಪ್ಪಿ 1:1. **2**

**1:2** ರೋಮಾ 1:7. ಕೊಲೊಸ್ಸೆ ಅಷ್ಟೇನೂ ಪ್ರಾಮುಖ್ಯವಲ್ಲದ ಸಣ್ಣ ಪಟ್ಟಣವಾಗಿದ್ದು ಈಗ ಟರ್ಕಿ ಎಂದು ಕರೆಯಲ್ಪಡುವ ಎಫೆಸದ ಪೂರ್ವಕ್ಕೆ 160 ಕಿಲೊ ಮೀಟರ್ ದೂರದಲ್ಲಿತ್ತು. ಅದು ಲವೊದಿಕೀಯಗೆ ಹತ್ತಿರವಾಗಿತ್ತು. **3-4**

**1:3-4** ರೋಮಾ 1:8; ಎಫೆ 1:15-16 ರೊಂದಿಗೆ ಹೋಲಿಸಿ ನೋಡಿರಿ. **5**

**1:5** *"ನಿಮಗೋಸ್ಕರ ಸಿದ್ಧವಾಗಿರುವ"*– 1 ಪೇತ್ರ 1:4.

*"ನಿರೀಕ್ಷೆ"*– ಇಲ್ಲಿ ನಿರೀಕ್ಷೆ ಎಂದರೆ ಮುಂದೊಂದು ದಿನ ತಮಗೆ ಸಿಗುವದು ಎಂಬದಾಗಿ ವಿಶ್ವಾಸಿಗಳು ನಿರೀಕ್ಷೆಯಿಂದಿರುವದಾಗಿದೆಯೇ ಹೊರತು ಅವರ ಹೃದಯಗಳಲ್ಲಿರುವ ಸದ್ಯದ ಅನುಭವಗಳ ನಿರೀಕ್ಷೆಯಲ್ಲ. ವ 27; ತೀತ 1:2; 2:13 ರೊಂದಿಗೆ ಹೋಲಿಸಿ ನೋಡಿರಿ.

*"ಸುವಾರ್ತೆ"*– ರೋಮಾ 1:16; 1 ಕೊರಿಂಥ 15:1-8. **6**

**1:6** *"ಫಲ"*– ಮತ್ತಾಯ 13:8; ಮಾರ್ಕ 4:26-29. ಸುವಾರ್ತೆಯು ರಕ್ಷಣೆಯನ್ನು ಕೊಡುವ ದೇವರ ಶಕ್ತಿಯಾಗಿದೆ (ರೋಮಾ 1:16). ಸುವಾರ್ತೆಯನ್ನು ಸ್ಪಷ್ಟವಾಗಿ, ಧೈರ್ಯವಾಗಿ ಮತ್ತು ನಂಬಿಗಸ್ತರಾಗಿ ಸಾರುವಾಗ ಫಲ ಸಿಕ್ಕುತ್ತದೆ.

*"ತಿಳುಕೊಂಡ"*– ತಿಳುಕೊಳ್ಳುವದು ಮತ್ತು ಫಲಕೊಡುವದು ಇವೆರಡರ ನಡುವೆಯಿರುವ ಸಂಪರ್ಕವನ್ನು ಗಮನಿಸಿರಿ. ಮತ್ತಾಯ 13:23 ರೊಂದಿಗೆ ಹೋಲಿಸಿ ನೋಡಿರಿ.

*"ಕೃಪೆ"*– ಯೋಹಾನ 1:14,16; ರೋಮಾ 1:7; ಎಫೆ 2:8-9 ರ ನೋಟ್ಸ್ ನೋಡಿರಿ. **7**

**1:7** *"ಎಫಪ್ರನು"*– 4:12; ಫಿಲೆ 23. ಯೇಸು ಕ್ರಿಸ್ತನ ಈ ಸೇವಕನ ಬಗ್ಗೆ ನಮಗೆ ಕೊಟ್ಟಿರುವ ವಿಷಯಗಳನ್ನು ಈ ವಚನಗಳಲ್ಲಿ ನೋಡಬಹುದು.

*"ದಾಸನು"*– ರೋಮಾ 1:1; 6:18,22. ಒಬ್ಬನ ವಿಷಯದಲ್ಲಿ, "ಕ್ರಿಸ್ತನ ನಂಬಿಗಸ್ತನಾದ ಸೇವಕನು" ಎಂಬ ಹೇಳಿಕೆಗಿಂತ ಹೆಚ್ಚಿನ ಹೇಳಿಗೆ ಬೇರೆ ಯಾವುದಿದೆ? **8**

**1:8** *"ಪವಿತ್ರಾತ್ಮಪ್ರೇರಿತವಾದ ಪ್ರೀತಿ"*– ರೋಮಾ 5:5. ದೇವರಾತ್ಮನ ಮೂಲಕವಾಗಿ ಮಾತ್ರವೇ ದೇವರ ಪ್ರೀತಿ (ಗ್ರೀಕ್ "ಅಗಾಫೆ" – 1 ಕೊರಿಂಥ 13:1 ರ ನೋಟ್ ನೋಡಿರಿ)

ನಮ್ಮ ಹೃದಯಗಳಲ್ಲಿ ನೆಲೆಸಲು ಸಾಧ್ಯ. ಇದೇ ಭೂಲೋಕದಲ್ಲಿಯೇ ಯೇಸು ಕ್ರಿಸ್ತನ ನಿಜವಾದ ವಿಶ್ವಾಸಿಗಳಲ್ಲಿ ಮಾತ್ರ ಇದನ್ನು ನಾವು ನೋಡಬಹುದು. **9**

**1:9** *"ನಿಮಗಾಗಿ ಪ್ರಾರ್ಥನೆ ಮಾಡುವಾಗ"*– ಇಲ್ಲಿ ಪೌಲನು ವಿಶ್ವಾಸಿಗಳಿಗಾಗಿ ಪ್ರಾರ್ಥನೆ ಮಾಡುವದರ ಇನ್ನೊಂದು ಉದಾಹರಣೆಯನ್ನು ನಾವು ನೋಡಬಹುದು – ಎಫೆ 1:17-19; 3:16-19; ಫಿಲಿಪ್ಪಿ 1:9. ಇವುಗಳಲ್ಲಿ ಒಂದರಲ್ಲಿಯೂ ಅವನು ದೇವರಿಂದ ಬೌತಿಕ ವಿಷಯಗಳನ್ನು ಬೇಡಿಕೊಂಡಿಲ್ಲ. ಜ್ಞಾನ, ತಿಳುವಳಿಕೆ, ಬಲ, ಪ್ರೀತಿ – ಉಳಿದೆಲ್ಲವುಗಳಿಗಿಂತ ಅವರು ಇವುಗಳನ್ನು ಹೊಂದಬೇಕೆಂದು ಅವನು ಬಯಸುತ್ತಾ ಇದ್ದನು. ನಾವು ಕಲಿತುಕೊಳ್ಳಬೇಕೆಂದು ದೇವರು ಬಯಸುವ ಪಾಠಗಳನ್ನ ಇದರಿಂದ ಕಲಿತುಕೊಳ್ಳೋಣ.

*"ಆತನ ಚಿತ್ತದ ತಿಳುವಳಿಕೆ"*– ರೋಮಾ 12:2. ಅವನು ಅವರಿಗಾಗಿ ಹೀಗೆ ಪ್ರಾರ್ಥನೆ ಮಾಡಿದ್ದಾನೆ ಯಾಕಂದರೆ ಅವರ ಜೀವಿತಗಳಲ್ಲಿ ಅವನು ನೋಡಲು ಬಯಸುವ ಇತರೆ ಕಾರ್ಯಗಳು (ವ 10) ಇದರ ಮೇಲೆ ಆಧಾರವಾಗಿವೆ. ದೇವರ ಚಿತ್ತ ಏನೆಂದು ಅರ್ಥಮಾಡಿಕೊಳ್ಳದೆ ಹೋದರೆ ದೇವರ ಚಿತ್ತದಂತೆ ನಡೆದುಕೊಳ್ಳಲು ನಮ್ಮಿಂದ ಆಗುವದಿಲ್ಲ.

*"ಸಂಪೂರ್ಣವಾದ ಜ್ಞಾನ ಮತ್ತು ಆತ್ಮೀಕ ತಿಳುವಳಿಕೆ"*– ಇದು ಈ ಪತ್ರಿಕೆಯ ಧ್ಯೇಯಗಳಲ್ಲಿ ಒಂದಾಗಿದೆ - ವ 28; 2:2-3; 3:16. ದೇವರು ಮಾತ್ರವೇ ಇವುಗಳನ್ನು ಕೊಡುವವನಾಗಿದ್ದಾನೆ – ಎಫೆ 1:17. ವಿದ್ಯಾಭ್ಯಾಸ ಅಥವಾ ತತ್ವಗಳಿಂದ ಇದನ್ನು ಉಂಟುಮಾಡಲು ಆಗುವದಿಲ್ಲ. ಇವುಗಳು ಪರಲೋಕದಿಂದ ಬರುತ್ತವೆ ಮತ್ತು ಇವುಗಳನ್ನು ಹೊಂದಬೇಕಾದರೆ ನಾವು ಪರಲೋಕದಲ್ಲಿರುವ ದೇವರನ್ನು ಆಶ್ರಯಿಸಿಕೊಳ್ಳಬೇಕು. ಯೋಬ 28:12-28; ಜ್ಞಾನೋ 2:1-6; 1 ಕೊರಿಂಥ 1:20,25,30; 2:10-14. **10**

**1:10** *"ಕರ್ತನಿಗೆ ಯೋಗ್ಯರಾಗಿ"*– ಎಫೆ 4:1; 1 ಥೆಸ 2:12. ಜ್ಞಾನ ಮತ್ತು ತಿಳುವಳಿಕೆಗೆ ಅಂತ್ಯವಿಲ್ಲ. ನಾವು ಹೇಗೆ ಜೀವಿಸಬೇಕೋ ಹಾಗೆ ಜೀವಿಸಲು ಅವುಗಳು ನಮ್ಮನ್ನು ಬಲಪಡಿಸಬೇಕು. ಒಂದುವೇಳೆ ನಾವು ಜ್ಞಾನ ಎಂಬದಾಗಿ ಕರೆಯುವಂಥದ್ದು ಈ ಕಾರ್ಯವನ್ನು ಮಾಡದೆ ಹೋದರೆ, ಅದನ್ನು ಜ್ಞಾನವೆಂದು ಕರೆಯುವದರಲ್ಲಿ ಯಾವುದೇ ಅರ್ಥವಿಲ್ಲ.

*"ಎಲ್ಲದರಲ್ಲಿಯೂ ಆತನನ್ನು ಸಂತೋಷಪಡಿಸುವದು"*– 2 ಕೊರಿಂಥ 5:9; ಗಲಾ 1:10; 1 ಥೆಸ 2:4. ಒಂದುವೇಳೆ ನಾವು ನಮ್ಮನ್ನು ಮೆಚ್ಚಿಸಿಕೊಳ್ಳಲು ಜೀವಿಸಿದರೆ ಯಾವುದೇ ರೀತಿಯಲ್ಲಿಯೂ ಕರ್ತನನ್ನು ಮೆಚ್ಚಿಸಲು ನಮ್ಮಿಂದ ಆಗುವದಿಲ್ಲ. ಆತನಿಗಿದ್ದ ಮನಸ್ಸು ನಮ್ಮಲ್ಲಿಯೂ ಇರಬೇಕು – ಯೋಹಾನ 8:29; ಫಿಲಿಪ್ಪಿ 2:5. ನಮ್ಮ ಕ್ರಿಯೆಗಳು ನಮಗೆ

ಏನು ಬೇಕು ಅಥವಾ ಬೇಡ, ನಮಗೆ ಯಾವುದು ಇಷ್ಟವಾಗುತ್ತದೆ ಅಥವಾ ಇಷ್ಟವಾಗುವದಿಲ್ಲ ಎಂಬದರ ಮೇಲೆ ಆಧಾರವಾಗಿರಬಾರದು – ಮತ್ತಾಯ 10:38-39. ಒಂದುವೇಳೆ ನಾವು ಈ ವಾಕ್ಯಗಳು ಹೇಳುವ ರೀತಿಯಲ್ಲಿ ಜೀವಿಸಿದರೆ, (ದಾವೀದನಂತೆ – 1 ಸಮು 13:14 ರ ನೋಟ್ ನೋಡಿರಿ) ದೇವರ ಹೃದಯಕ್ಕೆ ಒಪ್ಪುವಂಥ ಜನರಾಗಬಹುದು.

*"ಫಲ"*– ಯೋಹಾನ 15:1-8.

*"ದೇವರ ತಿಳುವಳಿಕೆಯಲ್ಲಿ ಅಭಿವೃದ್ಧಿಯಾಗುವದು"*– ದೇವರ ಚಿತ್ತದ ತಿಳುವಳಿಕೆಯಲ್ಲಿ ಮಾತ್ರವಲ್ಲ ಬದಲಾಗಿ ದೇವರ ವಿಷಯಗಳಲ್ಲಿಯೂ ಅಭಿವೃದ್ಧಿಯಾಗುವದು. ಫಿಲಿಪ್ಪಿ 3:10; 2 ಪೇತ್ರ 3:18 ರೊಂದಿಗೆ ಹೋಲಿಸಿ ನೋಡಿರಿ. **11**

**1:11** *"ಬಲಿಷ್ಠರು"*– ಎಫೆ 3:16; ಫಿಲಿಪ್ಪಿ 4:13. "ಪರಿಪೂರ್ಣವಾದ ಬಲ" –ದೇವರ ಶಕ್ತಿಯಾಗಿದ್ದು ನಿಜವಾದ ಆತ್ಮೀಕ ಶಕ್ತಿಯನ್ನು ಕೊಡುತ್ತದೆ. ವಿಶ್ವಾಸಿಗಳು ಈ ಶಕ್ತಿ ಮತ್ತು ಬಲವನ್ನು ಹೊಂದಬೇಕೆಂದು ಪೌಲನು ಯಾಕೆ ಬಯಸಿದನು. ಅವರು ಅದ್ಭುತಕಾರ್ಯಗಳನ್ನು ಮಾಡಬೇಕೆಂದು ಬಯಸಿದನೇ? ಅವರು ಪ್ರಸಿದ್ಧ ಬೋಧಕರಾಗಬೇಕೆಂದು ಬಯಸಿದನೇ? ಇಲ್ಲ – ಅವರು ತಮಗೆದುರಾಗುವ ಕಷ್ಟಗಳನ್ನು ಸಹಿಸಿಕೊಳ್ಳಬೇಕು, ತಾಳ್ಮೆ ಮತ್ತು ಸಂತೋಷವುಳ್ಳವರಾಗಿರಬೇಕು, ಅವರು ತಮ್ಮ ಸಣ್ಣ ಪಟ್ಟಣದಲ್ಲಿ ತಮ್ಮಿಂದಾಗುವ ಒಳ್ಳೆಯ ಕಾರ್ಯವನ್ನು ಮಾಡಬೇಕು ಮತ್ತು ದೇವರಿಗೆ ಮಹಿಮೆ ತರುವ ಜೀವಿತವನ್ನು ಜೀವಿಸಬೇಕೆಂದು ಬಯಸಿದನು.

*"ತಾಳ್ಮೆ ಮತ್ತು ದೀರ್ಘಶಾಂತಿ"*– ರೋಮಾ 8:25; 1 ಕೊರಿಂಥ 13:4; 2 ಕೊರಿಂಥ 1:6; ಗಲಾ 5:22; ಎಫೆ 4:2; 1 ಥೆಸ 5:14; ಇಬ್ರಿ 6:12; 10:36; 12:1; ಯಾಕೋಬ 5:10.

*"ಸಂತೋಷ"*– ಫಿಲಿಪ್ಪಿ 1:4; 3:1; 4:4. **12**

**1:12** *"ಕೃತಜ್ಞತಾಸ್ತುತಿ"*– ಇದು ಈ ಪತ್ರಿಕೆಯಲ್ಲಿ ಮತ್ತೆಮತ್ತೆ ಬರುತ್ತಿರುವ ಧ್ಯೇಯವಾಗಿದೆ (2:7; 3:15,17; 4:2) ಮತ್ತು ಸತ್ಯವೇದದಾದ್ಯಂತವೂ ನಾವು ಇದನ್ನು ನೋಡಬಹುದು (ಯಾಜಕ 7:12-13; ಕೀರ್ತನೆ 7:17; 50:14-15; 56:12; 100:4; ದಾನಿ 6:10; ಮತ್ತಾಯ 14:19; 26:27; ಎಫೆ 5:4,20; ಫಿಲಿಪ್ಪಿ 4:6; 1 ಥೆಸ 5:18).

*"ನಮ್ಮನ್ನು ಯೋಗ್ಯರನ್ನಾಗಿ ಮಾಡಿದ"*– ದೇವರ ಬಾಧ್ಯತೆಯಲ್ಲಿ ಪಾಲುಗಾರರಾಗಲು ಅವರು ತಮ್ಮನ್ನು ಯೋಗ್ಯರನ್ನಾಗಿ ಮಾಡಿಕೊಳ್ಳಲಿಲ್ಲ.. ಇದು ಯಾವುದೇ ವ್ಯಕ್ತಿಗಾದರೂ ಸಂಪೂರ್ಣವಾಗಿ ಅಸಾಧ್ಯವಾಗಿದೆ (ರೋಮಾ 3:19-20; ಎಫೆ 2:1-3; ಯೆರೆ 13:23). ನಾವು ಹೊಸದಾಗಿರುವ ಆತ್ಮೀಕ ಜನನದ ಮೂಲಕ ದೇವರ ಮಕ್ಕಳಾಗಿದ್ದರೆ ಮಾತ್ರ ಆತನೊಂದಿಗೆ

ಬಾಧ್ಯತೆಯನ್ನು ಹೊಂದಲು ಅರ್ಹರಾಗುತ್ತೇವೆ – ಯೋಹಾನ 1:12-13; 3:3-8; ರೋಮಾ 8:16-17; ಎಫೆ 4:10.

"*ಬಾಧ್ಯತೆ*"– ಎಫೆ 1:14; 1 ಪೇತ್ರ 1:4.

"*ಬೆಳಕಿನಲ್ಲಿ*"– ದೇವರು ಮತ್ತು ಯೇಸು ಕ್ರಿಸ್ತನ ಬೆಳಕು, ಪ್ರಭಾವದ ಬೆಳಕು – ಪ್ರಕ 21:23-24. **13**

**1:13** ಇಲ್ಲಿ ಎರಡು ವಿಭಿನ್ನವಾದ ರಾಜ್ಯಗಳನ್ನು ನೋಡಬಹುದು. ಪ್ರತಿಯೊಬ್ಬ ವ್ಯಕ್ತಿ ಇವೆರೆಡರಲ್ಲಿ ಯಾವುದಾದರು ಒಂದರಲ್ಲಿ ಇರುತ್ತಾನೆ.

"*ಅಂಧಕಾರ*"– ಅಪೊ 26:18; ಲೂಕ 22:53; ಎಫೆ 6:12; ಯೋಹಾನ 3:19-20. ಸೈತಾನನು ಅಂಧಕಾರ ಯುಗದ ಅಧಿಪತಿಯಾಗಿದ್ದಾನೆ. ಯೇಸು ಕ್ರಿಸ್ತನು ತನ್ನ ಬೆಳಕಿನ ರಾಜ್ಯದ ಮೇಲೆ ಆಳ್ವಿಕೆ ಮಾಡುತ್ತಾನೆ (ಮತ್ತಾಯ 4:17 ರಲ್ಲಿ ದೇವರ ರಾಜ್ಯದ ನೋಟ್ ನೋಡಿರಿ). ಆತನು ಜನರನ್ನು ಬಿಡುಗಡೆ ಮಾಡುತ್ತಾನೆ ಮತ್ತು ಅವರನ್ನು ಸೈತಾನನ ರಾಜ್ಯದಿಂದ ಬಿಡಿಸಿ ತನ್ನ ರಾಜ್ಯಕ್ಕೆ ನಡೆಸುತ್ತಾನೆ. ಅವರಿಗೆ ಬೆಳಕನ್ನು ಕೊಡುವ ಮೂಲಕ ಆತನು ಇದನ್ನು ಮಾಡುತ್ತಾನೆ ಮತ್ತು ತನ್ನ ಸರ್ವಶಕ್ತವಾದ ಶಕ್ತಿಯ ಮೂಲಕ ಅವರನ್ನು ಬೆಳಕಿನ ಮಕ್ಕಳನ್ನಾಗಿ ಮಾಡುತ್ತಾನೆ (2 ಕೊರಿಂಥ 4:4-6; ಎಫೆ 5:8). ಇದು ದೇವರ ಮಹತ್ತಾದ ಕಾರ್ಯವಾಗಿದ್ದು ಈಗ ಲೋಕದಾದ್ಯಂತ ನಡೆಯುತ್ತಾ ಇದೆ.

"*ಆತನ ಪ್ರಿಯ ಕುಮಾರನು*"– ಮತ್ತಾಯ 3:17. **14**

**1:14** "*ಆತನ ರಕ್ತದ ಮೂಲಕ ಬಿಡುಗಡೆ*"– ಎಫೆ 1:7. **15**

**1:15** "*ಅದೃಶ್ಯನಾದ ದೇವರ ಪ್ರತಿರೂಪನು*"– ದೇವರು ಆತ್ಮಸ್ವರೂಪನು ಆತನನ್ನು ಶಾರೀರಿಕ ಕಣ್ಣುಗಳಿಂದ ನೋಡಲು ಆಗುವದಿಲ್ಲ (ಯೋಹಾನ 1:18; 1 ತಿಮೊ 1:17; 6:16; ಇಬ್ರಿ 11:27). ಆದರೆ ದೇವರು ಹೇಗಿರುವನು ಎಂಬದನ್ನು ಯೇಸು ಕ್ರಿಸ್ತನು ಪ್ರಕಟಪಡಿಸಿದನು. ಆತನು ಮಾನವ ರೂಪದಲ್ಲಿರುವ ದೇವರ ಪ್ರತಿರೂಪನಾಗಿದ್ದನು – 2:9; ಯೋಹಾನ 1:1,14; 14:9; 2 ಕೊರಿಂಥ 4:4; ಇಬ್ರಿ 1:3.

"*ಜೇಷ್ಠಪುತ್ರನು*"– ರೋಮಾ 8:29; ಇಬ್ರಿ 1:6; 12:23; ಕೀರ್ತನೆ 89:27. ದೇವರ ಸ್ವಭಾವದಲ್ಲಿ ಪಾಲುಗಾರನಾಗಿರುವ ದೇವಕುಮಾರನು, ದೇವರಾಗಿದ್ದಾನೆ. ಇದರ ಅರ್ಥ ಅವನು ನಿತ್ಯನಾದವನಾಗಿದ್ದಾನೆ. ದೇವರಾಗಿರುವ ಆತನಿಗೆ ಆದಿ ಇಲ್ಲ, ಅವನು "ಜನಿಸಿಲ್ಲ". ಇಲ್ಲಿ "ಜೇಷ್ಠಪುತ್ರನು" (ಪ್ರೊಟೊಟೊಲೊಸ್) ಎಂದು ಭಾಷಾಂತರ ಮಾಡಲಾಗಿರುವ ಗ್ರೀಕ್ ಪದ ಶ್ರೇಷ್ಠತೆ ಮತ್ತು ಸಾರ್ವಭೌಮತೆಯನ್ನು ಸೂಚಿಸುತ್ತದೆ. ಹಳೆಯ ಒಡಂಬಡಿಕೆಯಲ್ಲಿ

ಪ್ರಕಟಿಸಲಾಗಿರುವ ಇಡೀ ಲೋಕದ ಸೃಷ್ಟಿಕರ್ತನಾಗಿರುವ ಸನಾತನ ದೇವರಾದ ಯೆಹೋವ ದೇವರೇ ಲೋಕದ ಜೇಷ್ಠಪುತ್ರನು ಎಂದು ಯೆಹೂದ್ಯರು ಸಹ ಹೇಳುವವರಾಗಿದ್ದಾರೆ. ಯೇಸು ಕ್ರಿಸ್ತನು ಎಲ್ಲಾ ಸೃಷ್ಟಿಗಳಿಗೆ ಒಡೆಯನು ಎಂದು ಇಲ್ಲಿ ಪೌಲನು ಹೇಳಿದ್ದಾನೆ. ಅಂದರೆ ಮುಂದಿನ ವಾಕ್ಯದಲ್ಲಿ ಅವನ ಮಾತುಗಳ ಅರ್ಥವನ್ನು ನಾವು ಸ್ಪಷ್ಟವಾಗಿ ತಿಳಿದುಕೊಳ್ಳಬಹುದಾಗಿದೆ. ಲೂಕ 2:11; ಫಿಲಿಪ್ಪಿ 2:6

"*ಆತನು*"– ಅಂದರೆ ಕರ್ತನಾದ ಯೇಸು ಕ್ರಿಸ್ತನು. **16**

**1:16** "*ಸಿಂಹಾಸನಗಳು*"– ಪ್ರಕ 4:4 ರೊಂದಿಗೆ ಹೋಲಿಸಿ ನೋಡಿರಿ.

"*ಪ್ರಭುತ್ವಗಳು ದೊರೆತನಗಳು*"– ಎಫೆ 1:21; 3:10.

"*ಯಾಕಂದರೆ*"– ಯೇಸು ಕ್ರಿಸ್ತನನ್ನು "ಜ್ಯೇಷ್ಠಪುತ್ರನು" ಎಂದು ಕರೆಯಲಾಗಿದೆ ಯಾಕಂದರೆ ಆತನ ಮೂಲಕವೇ ಸಮಸ್ತವೂ ಉಂಟಾಯಿತು (ಯೋಹಾನ 1:3; 1 ಕೊರಿಂಥ 8:6; ಇಬ್ರಿ 1:2; ಆದಿ 1:1) ಹೊರತು ಆತನು ಮೊದಲು ಹುಟ್ಟಿದ್ದರಿಂದ ಉಂಟಾಗಲಿಲ್ಲ. ಸಮಸ್ತಕ್ಕೂ ಆತನೇ ಸೃಷ್ಟಿಕರ್ತನಾಗಿರುವದರಿಂದ, ಆತನನ್ನು ಯಾರೂ ಸೃಷ್ಟಿಸಲಿಲ್ಲ ಎಂಬದು ಸ್ಪಷ್ಟವಾಗುತ್ತದೆ.

"*ಆತನಿಗೋಸ್ಕರ*"– ಒಬ್ಬನೇ ನಿಜವಾದ ದೇವರ ವಿಷಯದಲ್ಲಿ ಮಾತ್ರವೇ ಸಮಸ್ತವೂ ಆತನಿಗಾಗಿ ಸೃಷ್ಟಿಯಾಯಿತು ಎಂದು ಹೇಳಲು ಸಾಧ್ಯ. ಇದೇ ಗ್ರೀಕ್ ಪದವನ್ನು ರೋಮಾ 11:36 ರಲ್ಲಿಯೂ ಆತನಿಗೋಸ್ಕರ ಎಂಬದಾಗಿಯೇ ಭಾಷಾಂತರ ಮಾಡಲಾಗಿದೆ. ಅಲ್ಲಿ ಅವು ದೇವರನ್ನು ಮಾತ್ರವೇ ಸೂಚಿಸುತ್ತವೆ. ಯೇಸು ಕ್ರಿಸ್ತನು ದೊಡ್ಡ ದೇವರಿಂದ ಸೃಷ್ಟಿಯಾಗಿರುವಂಥ ಚಿಕ್ಕ ದೇವರಲ್ಲ. ಆತನೇ ದೇವರು. **17**

**1:17** "*ಎಲ್ಲಕ್ಕೂ ಮೊದಲು*"– ದೇವಕುಮಾರನಾಗಿರುವ ಯೇಸು ಕ್ರಿಸ್ತನು ಸೃಷ್ಟಿಯ ಭಾಗವಲ್ಲ. ಆತನು ಸೃಷ್ಟಿಗೂ ಮೊದಲೇ ಇದ್ದವನು ಮತ್ತು ಸೃಷ್ಟಿಯನ್ನು ಅಸ್ತಿತ್ವಕ್ಕೆ ತಂದವನು.

"*ಸಮಸ್ತಕ್ಕೂ ಆಧಾರಭೂತನು*"– ಇಬ್ರಿ 1:13 ರೊಂದಿಗೆ ಹೋಲಿಸಿ ನೋಡಿರಿ. ವಿಸ್ತಾರವಾದ ಜಗತ್ತು ಗೊಂದಲಕ್ಕೆ ಒಳಗಾಗದಂತೆ ಯೇಸು ಕ್ರಿಸ್ತನು ನೋಡಿಕೊಳ್ಳುತ್ತಾನೆ. ಆತನ ಶಕ್ತಿ ಅದನ್ನು ಕ್ರಮಪಡಿಸುತ್ತದೆ. ಆತನು ಅದರ ಎಲ್ಲಾ ಭಾಗಗಳನ್ನು ಒಟ್ಟುಗೂಡಿಸಿ ನಡೆಸುತ್ತಾನೆ. ದೇವರನ್ನು ಬಿಟ್ಟು ಬೇರೆ ಯಾರ ವಿಷಯದಲ್ಲಾದರೂ ಇದನ್ನು ಹೇಳಬಹುದೇ? **18**

**1:18** "*ಶಿರಸ್ಸು*"– ಎಫೆ 1:22-23 ನೋಡಿರಿ.

*"ದೇಹ"*– ರೋಮಾ 12:5; 1 ಕೊರಿಂಥ 12:12-13.

*"ಸಭೆ"*– ಮತ್ತಾಯ 16:18.

*"ಆದಿಸಂಭೂತನು"*– ಗ್ರೀಕ್ ಪದದ ಅರ್ಥ "ಮೂಲ" ಅಥವಾ "ಪ್ರಥಮ ಸ್ಥಾನ ಹೊಂದಿರುವವನು". ಯೇಸು ಕ್ರಿಸ್ತನ ಮೂಲಕವಾಗಿಯೇ ಸಭೆ ಅಸ್ತಿತ್ವಕ್ಕೆ ಬಂದಿದೆ ಮತ್ತು ಆತನು ಅದರಲ್ಲಿ ಪರಮಸ್ಥಾನವನ್ನು ಹೊಂದಿದ್ದಾನೆ.

*"ಸತ್ತವರೊಳಗಿಂದ ಮೊದಲು ಎದ್ದು ಬಂದವನು"*– ಪ್ರಕ 1:5. ಇದರ ಅರ್ಥ ಎಲ್ಲದಕ್ಕಿಂತ ಹೆಚ್ಚಾಗಿ ಮೊದಲು ಮರಣವನ್ನು ಜಯಿಸಿದಾತನು ಆತನೇ ಎಂಬದಾಗಿದೆ. ಇದರ ಅರ್ಥ ಆತನಿಗೆ ಪ್ರಥಮ ಸ್ಥಾನವಿದೆ, ಆತನ ಹಾಗೆ ಸತ್ತವರೊಳಗಿಂದ ಎದ್ದು ಬರುವವರೆಲ್ಲರಿಗೆ ಆತನೇ ಮೊದಲನೆಯವನಾಗಿದ್ದಾನೆ. ರೋಮಾ 14:9 ರೊಂದಿಗೆ ಹೋಲಿಸಿ ನೋಡಿರಿ.

*"ಪ್ರಮುಖನು"*– ಎಫೆ 1:22; ಫಿಲಿಪ್ಪಿ 2:9-11. ಯೇಸು ಕ್ರಿಸ್ತನಿಗೆ ಪ್ರಮುಖ ಸ್ಥಾನ ನೀಡಬೇಕು ಮತ್ತು ಆತನು ಅದನ್ನು ಹೊಂದುವನು. **19**

**1:19** ದೇವರ ಪರಿಪೂರ್ಣತೆಯೆಲ್ಲವೂ ಮನುಷ್ಯನಾಗಿ ಬಂದ ಕರ್ತನಾದ ಯೇಸು ಕ್ರಿಸ್ತನಲ್ಲಿದ್ದವು – 2:9; ಯೋಹಾನ 1:1,14. **20**

**1:20** *"ಸಮಾಧಾನ"*– ಇಡೀ ಲೋಕವು ದೇವರಿಂದ ದೂರವಾಗಿ ಪಾಪಕ್ಕೆ ಒಳಗಾಗಿದೆ (ರೋಮಾ 3:19-20), ದೇವರ ಕೋಪವು ಮಾನವರ ಪಾಪಗಳಿಗೆ ವಿರುದ್ಧವಾಗಿ ಉರಿಯುತ್ತಾ ಇತ್ತು (ರೋಮಾ 1:18). ಪರಲೋಕ ಮತ್ತು ಭೂಲೋಕದ ನಡುವೆ ಸಮಾಧಾನವೇ ಇರಲಿಲ್ಲ. ಸಮಾಧಾನವನ್ನು ಉಂಟುಮಾಡಲು ದೇವರು ಯೇಸು ಕ್ರಿಸ್ತನನ್ನು ಕಳುಹಿಸಿದನು. ಲೋಕದ ಪಾಪವನ್ನು ನಿವಾರಣೆ ಮಾಡಲು ತನ್ನ ರಕ್ತವನ್ನೇ ಯಜ್ಞವಾಗಿ ಅರ್ಪಿಸುವ ಮೂಲಕ ಯೇಸು ಕ್ರಿಸ್ತನು ಆ ಕಾರ್ಯವನ್ನು ಮಾಡಿದನು – ಯೋಹಾನ 1:29; ರೋಮಾ 5:10; 2 ಕೊರಿಂಥ 5:19; ಎಫೆ 2:16. **21**

**1:21** *"ಅನ್ಯರು"*– ಎಫೆ 2:12; 4:18.

*"ವೈರಿಗಳು"*– ರೋಮಾ 5:10; ಯಾಕೋಬ 4:4.

*"ದ್ವೇಷಮನಸ್ಸುಳ್ಳವರು"*– ನಾವು ದೇವರಿಗೆ ವಿರುದ್ಧವಾಗಿ ದುಷ್ಕೃತ್ಯಗಳನ್ನು ಮಾಡುವವರು ಎಂದು ಅವರು ಯೋಚಿಸಲಿಲ್ಲ ಯಾಕಂದರೆ ಅವರ ಆಲೋಚನೆಗಳು ಮತ್ತು ಅವರ ಮನಸ್ಸು ಹಾಗೂ ಹೃದಯದ ಬಯಕೆಗಳು ದೇವರ ವಿರುದ್ಧವಾಗಿದ್ದರಿಂದ ಅವರು ಆತನಿಗೆ ವೈರಿಗಳಾಗಿದ್ದರು. ರೋಮಾ 8:5-8 ರೊಂದಿಗೆ ಹೋಲಿಸಿ ನೋಡಿರಿ.

*“ದುಷ್ಕೃತ್ಯಗಳು”*– ಪಾಪದ ಕಾರ್ಯಗಳು ಜನರನ್ನು ದೇವರ ವೈರಿಗಳನ್ನಾಗಿ ಮಾಡುತ್ತವೆ.

**22**

**1:22** ವಚನ 20; ಎಫೆ 2:16-18.

*“ಪರಿಶುದ್ಧರು”*– ಎಫೆ 1:4; 5:25-27.

*“ನಿರ್ದೋಷಿಗಳು”*– 1 ಕೊರಿಂಥ 1:8; ರೋಮಾ 8:33. **23**

**1:23** *“ಆದರೆ”*– ಕೆಲವು ವಿಶ್ವಾಸಿಗಳು ನಂಬಿಕೆಯಲ್ಲಿ ಮುಂದುವರೆಯುವದಿಲ್ಲ ಎಂಬದಾಗಿ ಪೌಲನು ಹೇಳುತ್ತಾ ಇಲ್ಲ. ನಿಜವಾದ ವಿಶ್ವಾಸಿಗಳು ಯಾರು ಮತ್ತು ಅವರು ಏನು ಮಾಡುತ್ತಾರೆ ಎಂಬದನ್ನು ಅವನು ವಿವರಿಸುತ್ತಾ ಇದ್ದಾನೆ. ಅವರು ನಂಬಿಕೆಯಲ್ಲಿ ಮುಂದುವರೆಯುವದು ಸಮಾಧಾನ ಹೊಂದಿದ್ದಾರೆ ಎಂಬದಕ್ಕೆ ಪುರಾವೆಯಾಗಿದೆ. 1 ಕೊರಿಂಥ 15:2; ಇಬ್ರಿ 3:6,14; 10:38-39; ಯೋಹಾನ 10:27; ಲೂಕ 22:32; 1 ಯೋಹಾನ 2:19.

*“ನಿಂತು ಸ್ಥಿರವಾಗಿದ್ದು”*– ನಿಜವಾದ ನಂಬಿಕೆಯು ಸ್ಥಿರವಾದ ಅಸ್ತಿವಾರದ ಮೇಲೆ ನೆಲೆಯಾಗಿರುತ್ತದೆ (1 ಕೊರಿಂಥ 3:11; ಎಫೆ 2:20) ಮತ್ತು ವಿಶ್ವಾಸಿಗಳನ್ನು ದೃಢಪಡಿಸುತ್ತದೆ. “ಆಕಾಶದ ಕೆಳಗೆ” ಎಂಬ ಪದವು “ಭೂಲೋಕದ ಕಟ್ಟಕಡೆಯವರೆಗೆ” ಅಥವಾ ಇಡೀ ಲೋಕ ಎಂಬ ಪದಗಳ ಅರ್ಥವನ್ನು ಕೊಡುವದಿಲ್ಲ – ಮಾರ್ಕ 16:15; ಅಪೊ 13:47. ಆದರೆ ಪೌಲನು ಸುವಾರ್ತೆಯು ಲೋಕದ ಎಲ್ಲಾ ಭಾಗಗಳಿಗೆ ಹೇಗೆ ಹರಡಿಕೊಂಡಿದೆ ಎಂಬದನ್ನು ತಿಳಿಸುತ್ತಾ ಇದ್ದಾನೆ. **24**

**1:24** *“ನಾನು ನಿಮಗೋಸ್ಕರ ಅನುಭವಿಸುತ್ತಿರುವ ಬಾಧೆಗಳು”*– 4:10,18; 2 ಕೊರಿಂಥ 1:5-6; ಎಫೆ 3:1,13. ಸತ್ಯವನ್ನು ಬೋಧಿಸುವದು, ಕ್ರಿಸ್ತನಿಗಾಗಿ ಜನರನ್ನು ಗೆಲ್ಲುವದು ಮತ್ತು ಭೂಲೋಕದ ಮೇಲೆ ಕ್ರಿಸ್ತನ ಸಭೆಯನ್ನು ಸ್ಥಾಪಿಸಲು ಪ್ರಯಾಸಪಟ್ಟದ್ದರ ಫಲಿತಾಂಶವೇ ಪೌಲನಿಗೆ ಎದುರಾದ ಬಾಧೆಗಳಾಗಿವೆ. ತನಗೆ ಬಾಧೆಗಳು ಎದುರಾದರೂ ಅವನು ಸಂತೋಷಿಸಿದನು ಕಾರಣ ಅದು ಅವನಿಗೆ ಇಷ್ಟವಾಗಿರಲಿಲ್ಲ ಬದಲಾಗಿ ಕ್ರಿಸ್ತನಿಗಾಗಿ ಮತ್ತು ಇತರರಿಗಾಗಿ ಅನುಭವಿಸುತ್ತಾ ಇದ್ದೇನೆ ಎಂಬ ನಂಬಿಕೆ ಅವನದ್ದಾಗಿತ್ತು. ಅದನ್ನು ಅವನು ಶ್ರೇಷ್ಠ ಸೌಭಾಗ್ಯವೆಂದು ಪರಿಗಣಿಸುತ್ತಾ ಇದ್ದನು – ಫಿಲಿಪ್ಪಿ 1:29; 3:10. 1 ಪೇತ್ರ 4:13-16 ರೊಂದಿಗೆ ಹೋಲಿಸಿ ನೋಡಿರಿ.

*“ಉಳಿದದ್ದು”*– ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಅನುಭವಿಸಿದ ಬಾಧೆಗಳಲ್ಲಿ ಯಾವುದಾದರು ಬಾಕಿ ಉಳಿದಿದೆಯೇ? ಇಲ್ಲ, ಖಂಡಿತವಾಗಿಯೂ ಇಲ್ಲ. ಲೋಕದ ಪಾಪ ಪರಿಹಾರಕ್ಕಾಗಿ ಆತನು ಅರ್ಪಿಸಿದ ಯಜ್ಞ ಅಪೂರ್ಣವಾಗಿದೆಯೇ? ಇಲ್ಲ, ಪೌಲನು ಇಲ್ಲಿ

ಅದರ ಬಗ್ಗೆ ಮಾತನಾಡುತ್ತಾ ಇಲ್ಲ. ಖಂಡಿತವಾಗಿಯೂ ಯೇಸು ಕ್ರಿಸ್ತನು ನಮ್ಮೆಲ್ಲರ ಪಾಪಗಳಿಗಾಗಿ ಒಂದೇ ಸಲ ಯಜ್ಞವನ್ನು ಅರ್ಪಿಸಿದನು, ಅದು ಪರಿಪೂರ್ಣವಾದದ್ದು ಮತ್ತು ಶಾಶ್ವತವಾಗಿ ಮುಗಿದುಹೋಗಿರುವದಾಗಿದೆ – ಯೋಹಾನ 19:30; ಇಬ್ರಿ 10:10,14; 1 ಪೇತ್ರ 3:18. ಆದರೆ ಯೇಸು ಕ್ರಿಸ್ತನು ಈಗ ತನ್ನ ಸಭೆಯನ್ನು ಕಟ್ಟುತ್ತಾ ಇದ್ದಾನೆ (ಮತ್ತಾಯ 16:18; ಎಫೆ 2:19-22), ಮತ್ತು ಆತನು ತನ್ನ ಸೇವಕರಿಗೆ ತನ್ನೊಂದಿಗೆ ಕೆಲಸ ಮಾಡುವ ಸೌಭಾಗ್ಯವನ್ನು ಕೊಟ್ಟಿದ್ದಾನೆ. ಪಾಪದಿಂದ ತುಂಬಿರುವ ಈ ಲೋಕದಲ್ಲಿ ಇದರ ಅರ್ಥ ಕಷ್ಟಗಳು ಮತ್ತು ಹಿಂಸೆಗಳು ಹಾಗೂ ಬಾಧೆಗಳು ಮತ್ತು ಯಾತನೆಗಳಾಗಿವೆ. ಇವುಗಳು ಇನ್ನೂ ಮುಗಿದಿಲ್ಲ ಆದ್ದರಿಂದ ಇನ್ನೂ "ಉಳಿದುಕೊಂಡಿವೆ". ಸಭೆಯ ನಿಮಿತ್ತ ತನ್ನೊಂದಿಗೆ ಬಾಧೆಗಳನ್ನು ಅನುಭವಿಸುವ ಗೌರವವನ್ನು ಕ್ರಿಸ್ತನು ತನ್ನ ಸೇವಕರಿಗೆ ಕೊಟ್ಟಿದ್ದಾನೆ. **26**

- **1:26** ಎಫೆ 3:2-9; ರೋಮಾ 16:25-27.

"*ದೇವಜನರು*"– ರೋಮಾ 1:7. **27**

**1:27** "*ಮಹಿಮಾತಿಶಯ*"– ಎಫೆ 3:8. ಈ ಮಹಿಮಾತಿಶಯಗಳಿಗೆ ಹೋಲಿಸಿಕೊಂಡರೆ ಮಾನವನು ರೂಪಿಸುವ ಪ್ರತಿಯೊಂದು ಆಲೋಚನೆಯ ಪದ್ಧತಿಯು ಬಡತನಕ್ಕೆ ಒಳಗಾಗಿರುವದಾಗಿದೆ.

"*ಕ್ರಿಸ್ತನು ನಿಮ್ಮಲ್ಲಿದ್ದಾನೆ*"– ಯೋಹಾನ 17:23; ರೋಮಾ 8:9-10; 2 ಕೊರಿಂಥ 13:5; ಪ್ರಕ 3:20.

"*ಪ್ರಭಾವದ ನಿರೀಕ್ಷೆ*"– ರೋಮಾ 5:2; 8:18. ಒಂದುವೇಳೆ ಕ್ರಿಸ್ತನು ನಮ್ಮಲ್ಲಿ ಇಲ್ಲವೆಂದರೆ ನಾವು ರಕ್ಷಣೆ ಹೊಂದುವೆವು ಮತ್ತು ದೇವರ ಪ್ರಭಾವವನ್ನು ನೋಡುವೆವು ಎಂಬದನ್ನು ನಿರೀಕ್ಷಿಸಲು ನಮಗೆ ಯಾವುದೇ ಒಳ್ಳೆಯ ಕಾರಣಗಳು ಇಲ್ಲ. **28**

**1:28** ಅಪೊ 20:20-24 ರೊಂದಿಗೆ ಹೋಲಿಸಿ ನೋಡಿರಿ.

"*ಪೂರ್ಣಜ್ಞಾನ*"– ದೇವರು ಅವನಿಗೆ ಕೊಟ್ಟ ಜ್ಞಾನ – 1 ಕೊರಿಂಥ 1:30; 2:7,10,12,16. ಅವನು ತನ್ನ ಸ್ವಂತ ಜ್ಞಾನದ ವಿಷಯದಲ್ಲಿ ಹೆಚ್ಚಳಪಡುತ್ತಾ ಇಲ್ಲ. ಅವರಿಗೆ ಪರಿಪೂರ್ಣಜ್ಞಾನ ದೊರೆಯಲಿ ಎಂದು ಅವನು ಪ್ರಾರ್ಥನೆ ಮಾಡಿದನು – ವ 9. ಅವನಿಗೆ ಪೂರ್ಣಜ್ಞಾನವಿತ್ತು ಆದ್ದರಿಂದ ಅವರಿಗೂ ದೊರೆಯುತ್ತದೆ ಎಂದು ಅವನು ತಿಳಿದಿದ್ದನು. ಈಗಿನ ವಿಶ್ವಾಸಿಗಳೂ ಅದನ್ನು ಹೊಂದಬಹುದು – ಯಾಕೋಬ 1:5.

"*ಪ್ರವೀಣರು*"– 2 ಕೊರಿಂಥ 11:2; ಎಫೆ 4:12-15 ರೊಂದಿಗೆ ಹೋಲಿಸಿ ನೋಡಿರಿ. ಮತ್ತಾಯ 5:48; ಫಿಲಿಪ್ಪಿ 3:12,15; ಇಬ್ರಿ 6:1; 10:14 ರಲ್ಲಿ ವಚನಗಳು ಮತ್ತು ನೋಟ್ಸ್

ನೋಡಿರಿ. **29**

**1:29** ಪೌಲನಿಗೆ ಎಫೆ 3:20 ಕೇವಲ ಸಾಧಾರಣ ಸಿದ್ಧಾಂತ ಮಾತ್ರವಾಗಿರಲಿಲ್ಲ. ದೇವರ ಶಕ್ತಿ ಪೌಲನಿಗೆ ಕಾರ್ಯ ಮಾಡುತ್ತಾ ಇತ್ತಾದರೂ ಇದರ ಅರ್ಥ ಪೌಲನಿಗೆ ಎಲ್ಲವೂ ಸುಲಭವಾಗಿದ್ದವು ಎಂಬದಲ್ಲ ಎಂಬದನ್ನು ಗಮನಿಸಿರಿ. ಇದಕ್ಕೆ ವಿರುದ್ಧವಾಗಿತ್ತು – ಬಹಳ ಶ್ರಮೆ ಮತ್ತು ಕಷ್ಟ ಎಂಬದು ಇದರ ಅರ್ಥವಾಗಿದೆ (4:12; ಲೂಕ 13:24; 1 ಕೊರಿಂಥ 9:5 ರಲ್ಲಿಯೂ ಇದೇ ಗ್ರೀಕ್ ಪದವನ್ನು ಉಪಯೋಗಿಸಲಾಗಿದೆ).

# 2**1**

**2:1** *"ಹೋರಾಟ"*– 1:29. ಪೌಲನು ವಿಶ್ವಾಸಿಗಳನ್ನು ಭೇಟಿಯಾಗಿದ್ದರೂ ಭೇಟಿಯಾಗದೆ ಇದ್ದರೂ ಅವರಿಗಾಗಿ ಪ್ರಾರ್ಥನೆಯ ಮೂಲಕ ಹೋರಾಡುತ್ತಿದ್ದನು. ಪ್ರತಿಯೊಬ್ಬ ವಿಶ್ವಾಸಿಯೂ ಕ್ರಿಸ್ತನಿಗೆ ಬಹಳ ಅಮೂಲ್ಯನಾಗಿದ್ದಾನೆ ಎಂಬದನ್ನು ಅವನು ಚೆನ್ನಾಗಿ ಬಲ್ಲವನಾಗಿದ್ದನು ಮತ್ತು ಲೋಕದ ಎದುರು ಕ್ರಿಸ್ತನ ನಾಮವನ್ನು ಹೊತ್ತುಕೊಂಡನು.

*"ಲವೊದಿಕಿಯ"*– ಪ್ರಕ 3:14. **2**

**2:2** ಪೌಲನ ಪ್ರಾರ್ಥನೆಯ ವಿಷಯಗಳ ಮತ್ತೊಂದು ಉದಾಹರಣೆ – 1:9.

*"ಪ್ರೋತ್ಸಾಹ"*– ಅಪೊ 4:36; 9:31; 16:40; ರೋಮಾ 1:12; 15:4; ಎಫೆ 6:22; ಫಿಲಿಪ್ಪಿ 2:1; 1 ಥೆಸ 2:11-12. ಪೌಲನು ಇದನ್ನು ಪ್ರಾಮುಖ್ಯವಾದ ಸೇವೆ ಎಂದು ಪರಿಗಣಿಸುತ್ತಾ ಇದ್ದನು.

*"ಪ್ರೀತಿಯಿಂದ ಹೊಂದಿಕೆಯಾಗಿದ್ದು"*– ರೋಮಾ 12:10; ಎಫೆ 4:2-3; ಫಿಲಿಪ್ಪಿ 2:2.

*"ತಿಳಿದುಕೊಂಡು"*– ಪೌಲನು ಯಾವುದನ್ನು "ನಿಕ್ಷೇಪ" ಎಂಬದಾಗಿ ಕರೆಯುತ್ತಾ ಇದ್ದಾನೆ ಎಂಬದನ್ನು ನೋಡಿರಿ. ಜ್ಞಾನೋ 3:13-14; 8:10,19; 16:16 ರೊಂದಿಗೆ ಹೋಲಿಸಿ ನೋಡಿರಿ.

*"ಮರ್ಮ"*– ದೇವರಿಂದ ಬರುವ ಪ್ರಕಟನೆ. ಮತ್ತಾಯ 13:11 ರ ನೋಟ್ ನೋಡಿರಿ.

*"ದೇವರ, ತಂದೆಯ ಮತ್ತು ಯೇಸು ಕ್ರಿಸ್ತನ"*– ದೇವರು ಪ್ರಕಟಿಸದೆ ಹೋದರೆ ಯೇಸು ಕ್ರಿಸ್ತನನ್ನು ತಿಳಿಯಲು ಯಾರಿಂದಲು ಆಗುವದಿಲ್ಲ – 2 ಕೊರಿಂಥ 4:4-6. ಇದೇ ಪ್ರಕಾರ ಯೇಸು ಕ್ರಿಸ್ತನು ಪ್ರಕಟಿಸದೆ ಹೋದರೆ ಆತನನ್ನು ತಿಳಿಯಲು ಯಾರಿಂದಲೂ ಆಗುವದಿಲ್ಲ – ಮತ್ತಾಯ 11:27. ಕರ್ತನಾದ ಯೇಸು ಕ್ರಿಸ್ತನು ಮತ್ತು ತಂದೆಯಾದ ದೇವರ ಕುರಿತಾದ ತಿಳುವಳಿಕೆಯು ಎಲ್ಲವನ್ನು ಒಟ್ಟುಗೂಡಿಸಿದರೂ ಅವೆಲ್ಲವುಗಳಿಗಿಂತ ದೊಡ್ಡ

ನಿಕ್ಷೇಪವಾಗಿದೆ. ಫಿಲಿಪ್ಪಿ 3:7-11; ಯೋಹಾನ 17:3 ರೊಂದಿಗೆ ಹೋಲಿಸಿ ನೋಡಿರಿ. **3**

**2:3** ಒಂದುವೇಳೆ ನಾವು ಯೇಸು ಕ್ರಿಸ್ತನನ್ನು ತಿಳಿದುಕೊಂಡಿದ್ದರೆ ಎಲ್ಲಾ ರೀತಿಯ ಆತ್ಮೀಕ ಜ್ಞಾನದ ಮೂಲವನ್ನೇ ನಾವು ತಿಳಿದವರಾಗಿರುತ್ತೇವೆ. "ಎಲ್ಲಾ" ಎಂಬ ಪದವನ್ನು ಗಮನಿಸಿರಿ. ಎಲ್ಲಾ ಜ್ಞಾನ ಯಾವುದೇ ಮೇರೆಯಿಲ್ಲದೆ, ಕ್ರಿಸ್ತನಲ್ಲಿದೆ. ನಮಗೆ ಎಲ್ಲಾ ತತ್ವಗಳು ಗೊತ್ತಿದ್ದರೂ ಮತ್ತು ಲೋಕದ ತಿಳುವಳಿಕೆಯನ್ನೆಲ್ಲಾ ನಾವು ಹೊಂದಿದ್ದರೂ ಒಂದುವೇಳೆ ಆತನನ್ನು ತಿಳಿದುಕೊಂಡಿಲ್ಲವೆಂದರೆ ಸಂಪೂರ್ಣವಾಗಿ ಕೊರತೆಯಲ್ಲಿರುವವರಾಗಿದ್ದೇವೆ. 1 ಕೊರಿಂಥ 1:20-21 ನೋಡಿರಿ. ಕೆಲವರು ಏನನ್ನು ರಕ್ಷಣೆಗೆ ನಡೆಸುವ ಜ್ಞಾನವೆಂದು ಹೇಳುತ್ತಾರೋ ಅದು ಗರ್ವ ಮತ್ತು ಅಹಂಕಾರದ ಮಾರ್ಗವಾಗಿದೆಯೇ ಹೊರತು ರಕ್ಷಣೆಯ ಮಾರ್ಗವಲ್ಲ.

"*ಅಡಗಿಸಿಕೊಂಡಿರುವ*"– ಯೇಸು ಕ್ರಿಸ್ತನ ಜ್ಞಾನ ಮತ್ತು ತಿಳುವಳಿಕೆ ಎಲ್ಲರಿಗೂ ಸ್ಪಷ್ಟವಾಗುವದಿಲ್ಲ, ಅವುಗಳು ನೆಲದ ಮೇಲೆ ಬಿದ್ದಿರುವದಿಲ್ಲ. ಜನರು ಅಡಕವಾಗಿರುವ ನಿಕ್ಷೇಪಗಳನ್ನು ಹುಡುಕುವ ಹಾಗೆ ಅವುಗಳನ್ನು ಹುಡುಕಬೇಕು. ಜ್ಞಾನೋ 2:1-6 ರೊಂದಿಗೆ ಹೋಲಿಸಿ ನೋಡಿರಿ. 119 ನೇ ಕೀರ್ತನೆಯು ಒಬ್ಬನು ಪೂರ್ಣ ಹೃದಯದಿಂದ ಆತ್ಮೀಕ ತಿಳುವಳಿಕೆಗಾಗಿ ಹುಡುಕಾಟ ನಡೆಸುವದರ ಮಾದರಿಯನ್ನು ಕೊಡುತ್ತದೆ. ಆತನನ್ನು ಅನುಸರಿಸುವವರು ಆನಂದವುಳ್ಳವರಾಗಿರುತ್ತಾರೆ. **4**

**2:4** "*ರಂಜನೆಯ ಮಾತುಗಳಿಂದ*"–ಇತರರನ್ನು (ಮತ್ತು ತಮ್ಮನ್ನು) ಮೋಸಗೊಳಿಸಿಕೊಳ್ಳುವವರು ಯಾವಾಗಲೂ ಇದ್ದೇ ಇರುತ್ತಾರೆ. ಮಾನವನು ಕಂಡುಹಿಡಿದಿರುವ ಮಾರ್ಗಗಳು ಮತ್ತು ತತ್ವ ಹಾಗೂ ಧರ್ಮದ ಜ್ಞಾನ ಹೆಚ್ಚು ಆಕರ್ಷಕವಾಗಿ ಮತ್ತು ಉತ್ತಮವಾಗಿ ತೋರುವಂತೆ ಮಾಡುತ್ತಾರೆ. ಯೇಸು ಕ್ರಿಸ್ತನಲ್ಲಿನ ನಂಬಿಕೆ ಮತ್ತು ಸತ್ಯದ ಕುರಿತಾದ ತಿಳುವಳಿಕೆ ಮತ್ತು ಆತನು ಕೊಡುವ ಕಾರ್ಯಗಳ ಕುರಿತಾದ ವಾಸ್ತವವು ನಾವು ತಪ್ಪಾದ ಮಾರ್ಗಗಳಿಗೆ ಹೋಗದಂತೆ ನಮ್ಮನ್ನು ಕಾಯುತ್ತವೆ. **5**

**2:5** "*ಆತ್ಮದಿಂದ*"– 1 ಕೊರಿಂಥ 5:3-4. ತನ್ನ ಆತ್ಮವು ದೇಹವನ್ನು ಬಿಟ್ಟು ಬೇರೆ ಕಡೆಗಳಿಗೆ ಪ್ರಯಾಣಿಸುತ್ತದೆ ಎಂದು ಪೌಲನು ಹೇಳುತ್ತಾ ಇಲ್ಲ. ಅವನ ಮಾತಿನ ಅರ್ಥವೇನೆಂದರೆ ಅವನ ಮನಸ್ಸು, ಹೃದಯ, ಆಲೋಚನೆಗಳು ಅವರ ಮೇಲೆ ಹಾಗೂ ಅವರ ವಿಷಯಗಳ ಮೇಲೆ ನೆಲೆಯಾಗಿವೆ. ಪೌಲನು "ನೋಡಿದ" –(ಅವರ ಬಗ್ಗೆ ಕೇಳಿದ ಮಾಹಿತಿಯಿಂದ ತಿಳಿದುಕೊಂಡ ವಿಷಯಗಳು) ಸಂಗತಿಗಳು ಅವರು ಉತ್ತಮವೆನಿಸುವ ವಾದಗಳಿಂದ ಮೋಸ ಹೋಗುವದಿಲ್ಲ ಎಂಬ ನಿರೀಕ್ಷೆಯನ್ನು ಅವನಿಗೆ ನೀಡಿದವು.

"*ಕ್ರಮ*"– 1 ಕೊರಿಂಥ 14:40.

*“ಕ್ರಿಸ್ತನಂಬಿಕೆಯಲ್ಲಿ ದೃಢವಾಗಿ ನಿಂತು”*– ವಂಚಿಸುವ ಬೋಧನೆಗಳು ಮತ್ತು ಸೈತಾನನ ಪ್ರತಿಯೊಂದು ತಂತ್ರಗಳನ್ನು ಎದುರಿಸಲು ಇದು ನಮ್ಮನ್ನು ಬಲಪಡಿಸುತ್ತದೆ (2 ಕೊರಿಂಥ 1:24; ಎಫೆ 6:16; 1 ಪೇತ್ರ 5:9; 1 ಯೋಹಾನ 5:4). **6**

**2:6** ಮತ್ತಾಯ 1:1 ರಲ್ಲಿ “ಕ್ರಿಸ್ತನು” ಮತ್ತು “ಯೇಸು” ಕುರಿತಾದ ನೋಟ್ಸ್ ನೋಡಿರಿ. ಲೂಕ 2:11 ರಲ್ಲಿ “ಕರ್ತನು” ಕುರಿತಾದ ನೋಟ್ಸ್ ನೋಡಿರಿ. ಅವರು ಯೇಸು ಕ್ರಿಸ್ತನ ಚರಿತ್ರೆಯ ಕುರಿತಾದ ಸತ್ಯವನ್ನು ಅಂಗೀಕರಿಸಿಕೊಂಡಿದ್ದರು. ಅವರು ಯಾವುದೇ ರಹಸ್ಯಾರ್ಥವಾದ ಆಲೋಚನೆಯನ್ನು ಹೊಂದಿರಲಿಲ್ಲ, ಯೇಸು ಕ್ರಿಸ್ತನ ಕುರಿತಾದ ಊಹೆ ಮತ್ತು ಕಲ್ಪನೆಯ ವಿಷಯಗಳನ್ನು ಹೊಂದಿರಲಿಲ್ಲ. ದೇವರಿಂದ ಅಭಿಷೇಕ ಹೊಂದಿದ್ದ ಮತ್ತು ಪರಲೋಕದಿಂದ ಬಂದ ಕರ್ತನಾದ ಯೇಸು ಕ್ರಿಸ್ತನ ರಕ್ತ ಹಾಗೂ ದೇಹದಲ್ಲಿ ಅವರು ನಂಬಿಕೆಯುಳ್ಳವರಾಗಿದ್ದರು. ನಂಬಿಕೆಯಿಂದ ಅವರು “ಕರ್ತನನ್ನು” ಅಂಗೀಕರಿಸಿಕೊಂಡಿದ್ದರು ಎಂಬದನ್ನು ಗಮನಿಸಿರಿ. ಅವರಿಗೆ ಈ ಸತ್ಯವನ್ನು ಕಲಿಸಲಾಗಿತ್ತು ಮತ್ತು ಅವರು ಅದನ್ನು ನಂಬಿದ್ದರು ಹಾಗೂ ಆತನಿಗೆ ತಮ್ಮನ್ನು ಒಪ್ಪಿಸಿದ್ದರು. ಈಗ ಅದೇ ನಂಬಿಕೆಯಿಂದ ಅವರು ಜೀವಿಸಲು ಮುಂದುವರೆಸಬೇಕು (2 ಕೊರಿಂಥ 5:7).

*“ನಡೆದುಕೊಳ್ಳಿರಿ”*– ಅಥವಾ “ಮುಂದೆ ಸಾಗಿರಿ” – ಎಫೆ 2:10 ರ ನೋಟ್ ನೋಡಿರಿ. **7**

**2:7** *“ಆತನಲ್ಲಿ ಬೇರೂರಿಕೊಂಡು ಭಕ್ತಿವೃದ್ಧಿಯನ್ನು ಹೊಂದಿ”*– ಎಫೆ 3:17 ರೊಂದಿಗೆ ಹೋಲಿಸಿ ನೋಡಿರಿ. ವಿಶ್ವಾಸಿಗಳನ್ನು ಕೆಲವು ವಿಷಯಗಳಲ್ಲಿ ಗಿಡಗಳು ಅಥವಾ ಮರಗಳಿಗೆ ಹೋಲಿಸ ಬಹುದು – ಮತ್ತಾಯ 12:33; 13:1-30; ಕೀರ್ತನೆ 1:3. ಯೇಸು ಕ್ರಿಸ್ತನು ಒಳ್ಳೆಯ ನೆಲವಾಗಿದ್ದಾನೆ ವಿಶ್ವಾಸಿಗಳು ಆತನಲ್ಲಿ ಬೇರೂರಿರಬೇಕು. ಅವರು ಈಗಾಗಲೇ ಬೇರೂರಿದ್ದಾರೆ, ಆದರೆ ಕ್ರಮೇಣವಾಗಿ ವೃದ್ಧಿಯಾಗುತ್ತಾರೆ. ಅವರು ಕಟ್ಟಡದಂತಿದ್ದಾರೆ ಮತ್ತು ಯೇಸು ಕ್ರಿಸ್ತನು ಅಡಿಪಾಯವಾಗಿದ್ದಾನೆ ಅದರ ಮೇಲೆ ಅವರು ಕಟ್ಟಲ್ಪಟ್ಟಿದ್ದಾರೆ – ಎಫೆ 2:19-22; 1 ಪೇತ್ರ 2:4-5; 1 ಕೊರಿಂಥ 3:11.

*“ನಂಬಿಕೆಯಲ್ಲಿ”*– ಅವರು ಯೇಸು ಕ್ರಿಸ್ತನ ಸತ್ಯದಲ್ಲಿ ಹೆಚ್ಚೆಚ್ಚಾಗಿ ಅಭಿವೃದ್ಧಿಯಾಗಬೇಕು, ಅದನ್ನು ಹೆಚ್ಚೆಚ್ಚು ದೃಢವಾಗಿ ನಂಬಬೇಕು.

*“ಸ್ತೋತ್ರಮಾಡುವದು”*– ಎಫೆ 5:4,20; 1 ಥೆಸ 5:18. **8**

**2:8** *“ಎಚ್ಚರಿಕೆಯಾಗಿರಿ”*– ಅಥವಾ “ಜಾಗರೂಕರಾಗಿರಿ” – ಅದಕ್ಕೆ ತಕ್ಕ ಅಪಾಯ ಅವರಿಗೆ ಎದುರಾಗುವದಾಗಿತ್ತು – ಏನೆಂದರೆ ಅವರು ಆಲೋಚನೆಯ ಕೆಟ್ಟ ಪದ್ಧತಿಗೆ ಒಳಗಾಗುವ ಅಪಾಯವನ್ನು ಎದುರಿಸುವವರಾಗಿದ್ದರು. 16-23 ವಚನಗಳಲ್ಲಿ ಪೌಲನು

ಕೊಲೊಸ್ಸೆದವರು ಎದುರಿಸುತ್ತಿದ್ದ ಪದ್ಧತಿಯ ಬಗ್ಗೆ ಮಾತನಾಡುತ್ತಾ ಇದ್ದಾನೆ. ಇಂದೂ ಜನರು ಅದೇ ರೀತಿಯ ಅಥವಾ ಭಿನ್ನವಾದ ಪರಿಸ್ಥಿತಿಯನ್ನು ಎದುರಿಸುತ್ತಾ ಇರಬಹುದು ಆದರೆ ನಾವೂ ಎಚ್ಚರಿಕೆಯಿಂದ ಇರಬೇಕಾದದ್ದು ಬಹಳ ಪ್ರಾಮುಖ್ಯವಾಗಿದೆ. ಪ್ರತಿಯೊಂದು ತಲೆಮಾರಿನಲ್ಲಿಯೂ ಒಂದು ವಿಷಯ ದೃಢವಾಗಿದೆ – ಯಾವುದೇ ತತ್ವವಾಗಲಿ ಅಥವಾ ಧಾರ್ಮಿಕ ಆಲೋಚನೆಯ ಪದ್ದತಿಯಾಗಲಿ ಕರ್ತನಾದ ಯೇಸು ಕ್ರಿಸ್ತನನ್ನು ಹೊರಗಿಡುವದಾದರೆ ಅದು ಹುರುಳಿಲ್ಲದ್ದು ಮತ್ತು ವಂಚನೆಯುಳ್ಳದ್ದಾಗಿದೆ. ತತ್ವಜ್ಞಾನವು ಅನ್ವೇಷಣೆಯಾಗಿದ್ದು ಮಾನವರು ಅದನ್ನು ಜ್ಞಾನವೆಂದು ಪರಿಗಣಿಸುತ್ತಾರೆ, ಈ ಮೂಲಕ ಅವರು ಸತ್ಯ ಮತ್ತು ವಾಸ್ತವದ ಸ್ವಭಾವವನ್ನು ತರ್ಕ ಹಾಗೂ ಕಾರಣಗಳಿಂದ ಪತ್ತೆಹಚ್ಚಲು ಮುಂದಾಗುತ್ತಾರೆ. ಯೇಸು ಕ್ರಿಸ್ತನೇ ಸತ್ಯ, ಮತ್ತು ಎಲ್ಲಾ ಆತ್ಮೀಕ ಜ್ಞಾನವು ಆತನಲ್ಲಿ ಅಡಕವಾಗಿವೆ. ತತ್ವದ ವಿಧಾನಗಳು ಮಾನವರನ್ನು ಎಂದಿಗೂ ಆತನ ಬಳಿಗೆ ನಡೆಸುವದಿಲ್ಲ. ಸತ್ಯವೇದವು ವಾಸ್ತವ ಸ್ವಭಾವದ ಪ್ರಕಟನೆಯಾಗಿದೆ ಮತ್ತು ಮಾನವರು ತಿಳಿದುಕೊಳ್ಳಬೇಕೆಂದು ದೇವರು ಬಯಸುವ ಆತ್ಮೀಕವಾದ ಎಲ್ಲಾ ವಿಷಯಗಳು ಅದರಲ್ಲಿ ಬರೆಯಲ್ಪಟ್ಟಿವೆ. ತತ್ವಜ್ಞಾನವು ಊಹೆಯಾಗಿದೆ. ಅದು ಎಂದಿಗೂ ನಿಜವಾದ ದೇವರ ಬಳಿಗೆ ನಡೆಸುವದಿಲ್ಲ (1 ಕೊರಿಂಥ 1:20-21). ನಿಜವಾದ ದೇವರಾಗಿರುವ ಯೇಸು ಕ್ರಿಸ್ತನ ಕಡೆಗೆ ಸತ್ಯವೇದವು ನಮ್ಮನ್ನು ನಡೆಸುತ್ತದೆ. ಹುದುವಾಗಿ ತತ್ವಜ್ಞಾನಿಗಳು ಒಬ್ಬರ ಸಂಗಡಲೊಬ್ಬರು ಭಿನ್ನಾಭಿಪ್ರಾಯವುಳ್ಳವರಾಗಿರುತ್ತಾರೆ ಮತ್ತು ನಿರೂಪಿಸಲು ಆಗದೆ ಇರುವ ಹೇಳಿಕೆಗಳನ್ನು ಕೊಡುತ್ತಾರೆ. ಅವರು ತಮಗೆ ಗೊತ್ತಿಲ್ಲದಿರುವ, ತಮ್ಮ ಜ್ಞಾನಕ್ಕಿಂತಲೂ ಉನ್ನತವಾಗಿರುವ ವಿಷಯಗಳ ಬಗ್ಗೆ ಅವರು ಯೋಚಿಸುವವರಾಗಿದ್ದಾರೆ. ದೇವರ ಜ್ಞಾನವಾಗಿರುವ ಯೇಸು ಕ್ರಿಸ್ತನು (1 ಕೊರಿಂಥ 1:24), ನಮ್ಮೆದುರಿನಲ್ಲಿ ನಿಲ್ಲುವವನಾಗಿದ್ದಾನೆ. ಆತನಲ್ಲಿಯೇ ಜ್ಞಾನ ಮತ್ತು ತಿಳುವಳಿಕೆಯ ಎಲ್ಲಾ ನಿಕ್ಷೇಪಗಳನ್ನು ನಾವು ಹೊಂದುತ್ತೇವೆ. ಇಡೀ ಸತ್ಯವೇದದಲ್ಲಿ "ತತ್ವಜ್ಞಾನ" ಎಂಬದಾಗಿ ಒಂದು ಸಲ ಮಾತ್ರವೇ ಬರೆಯಲ್ಪಟ್ಟಿರುವದು ಆಸಕ್ತಿಕರ ವಿಷಯವಾಗಿದೆ. ಇಬ್ರಿಯ ಮತ್ತು ಗ್ರೀಕ್ ಸತ್ಯವೇದಗಳಲ್ಲಿಯೂ "ತತ್ವಜ್ಞಾನ" ಎಂಬ ಪದವನ್ನು ಕೇವಲ ಒಮ್ಮೆ ಮಾತ್ರವೇ ಬರೆಯಲಾಗಿದೆ (ಅಪೊ 17:18), ಆದರೆ ಮತ್ತೊಮ್ಮೆ ಪರ್ಯಾಯ ಪದದ ಮೂಲಕ ಕಾಣಿಸಿಕೊಂಡಿದೆ – 1 ಕೊರಿಂಥ 1:20. ಈ ರೀತಿ ಸತ್ಯವೇದದ ಗ್ರಂಥಕರ್ತನಾಗಿರುವ ದೇವರು ಆತ್ಮೀಕ ಜ್ಞಾನದ ಕ್ಷೇತ್ರದಲ್ಲಿ ತತ್ವಜ್ಞಾನವು ಪ್ರಯೋಜನವಿಲ್ಲದ್ದು ಎಂಬದನ್ನು ಪ್ರಕಟಪಡಿಸಿದ್ದಾನೆ. ಒಂದುವೇಳೆ ದೇವರು ಏನನ್ನಾದರೂ ಕಡೆಗಣಿಸಿದರೆ ಅಥವಾ ಅದರ ಸಮ್ಮತಿಯ ಬಗ್ಗೆ ಮಾತನಾಡಲು ವಿಫಲನಾದರೆ, ದೇವರು ನಮಗೆ ಕಲಿಸಬೇಕೆಂದು ಬಹಳವಾಗಿ ಬಯಸುವ ವಿಷಯಗಳಿಗೆ ಕೊಡುಗೆಯನ್ನು ಕೊಡಲು ಅವುಗಳಿಗೆ ಆಗುವದಿಲ್ಲ ಎಂಬ ದೃಢತೆ ನಮಗಿರಬೇಕು.

*"ನಿಮ್ಮನ್ನು ವಶಮಾಡಿಕೊಳ್ಳುತ್ತವೆ"*– ಅಥವಾ ಗ್ರೀಕ್ ಪದವನ್ನು "ನೀವು ಸಿಕ್ಕಿಕೊಳ್ಳುವಂತೆ ಮಾಡುವವು" ಅಥವಾ "ನಿಮ್ಮನ್ನು ಬಂಧಿಸಿಕೊಳ್ಳುವವು" ಎಂಬದಾಗಿಯೂ ಭಾಷಾಂತರ ಮಾಡಬಹುದು.

*"ಮನುಷ್ಯರ ಸಂಪ್ರದಾಯಗಳು"*– ಕೊಲೊಸ್ಸೆಯಲ್ಲಿ ಕ್ರೈಸ್ತರಿಗೆ ತೊಂದರೆ ಮಾಡುತ್ತಿದ್ದ ತತ್ವಜ್ಞಾನವು ಮಾನವ ಸಂಪ್ರದಾಯಗಳ ಮೇಲೆ ಆಧಾರವಾಗಿತ್ತು (ಮಾತುಗಳು ಅಥವಾ ಬರವಣಿಗೆಗಳು) ಮತ್ತು ಕೆಲವು ಮೂಲಭೂತ ಪಾಠಗಳನ್ನು ಮಾನವರು ಲೋಕದಿಂದ ಕಲಿತುಕೊಂಡಿರುವದಾಗಿ ಅಂದುಕೊಳ್ಳುತ್ತಾ ಇದ್ದರು. ಆ ತತ್ವಜ್ಞಾನಿಗಳು ಕಾರ್ಯಗಳ ಪ್ರಾಥಮಿಕ ವಿಷಯಗಳನ್ನು ಮಾತ್ರವೇ ಬಲ್ಲವರಾಗಿದ್ದರು (ಆದರೆ ನಮಗೆ ಆಳವಾದ ತಿಳುವಳಿಕೆಯಿದೆ ಎಂದು ಹೊಗಳಿಕೊಳ್ಳುತ್ತಾ ಇದ್ದರು). ಅವರ ತತ್ವಜ್ಞಾನವು ಕ್ರಿಸ್ತನ ಮೇಲೆ ಆಧಾರವಾಗಿರಲಿಲ್ಲ, ಆದ್ದರಿಂದ ಅವು "ಖಾಲಿಯಾದ ವಂಚನೆಯಾಗಿದ್ದವು". ಅವು ಯೇಸು ಕ್ರಿಸ್ತನ ಮೇಲೆ ಆಧಾರವಾಗಿರಲಿಲ್ಲವಾದ್ದರಿಂದ ನಿಜವಾದ ಜ್ಞಾನವನ್ನು ಸೇರಿಸಿಕೊಂಡಿರಲಿಲ್ಲ. ಆದ್ದರಿಂದ ಅದು ತನ್ನಿಂದ ಕೊಡಲು ಆಗದೆ ಇರುವದನ್ನು ಕೊಡುವದಾಗಿ ವಾಗ್ದಾನ ಮಾಡುತ್ತಾ ಇತ್ತು. ಆಗಿನ ಸತ್ಯವಾಗಿದ್ದ ಹಾಗೆ ಈಗಲೂ ಅದು ಸತ್ಯವಾಗಿದೆ. ಕೆಲವು ಸಂಪ್ರದಾಯಗಳು ಅಥವಾ ಪ್ರಾಚೀನವಾದ ಧಾರ್ಮಿಕ ಬರವಣಿಗೆಗಳಲ್ಲ ಅಥವಾ ಶುದ್ಧವಾದ ಮಾನವನ ಕಲ್ಪನೆಗಳ ಮೇಲೆ ಆಧಾರವಾಗಿರುವ ಅನೇಕ ತತ್ವಜ್ಞಾನಗಳು ಮತ್ತು ಧಾರ್ಮಿಕ ಆಲೋಚನೆಗಳು ಇವೆ. ದೇವರ ಜ್ಞಾನವಾಗಿರುವ ಯೇಸು ಕ್ರಿಸ್ತನನ್ನು ಅವುಗಳು ಬಿಟ್ಟಿರುವದರಿಂದ, ಆ ಪದ್ಧತಿಗಳೆಲ್ಲವೂ ಅರ್ಥಹೀನ ಮತ್ತು ವಂಚನೆಯಾಗಿವೆ. **9**

**2:9** 1:19 ನೋಡಿರಿ. ಇದರ ಅರ್ಥ ಯೇಸುಕ್ರಿಸ್ತನು, ಇಡೀ ಜಗತ್ತಿನ ಸೃಷ್ಟಿಕರ್ತನಾದ ಒಬ್ಬನೇ ನಿಜವಾದ ದೇವರ ಪ್ರತಿರೂಪ ಎಂಬದಾಗಿದೆ. ದೈವೀಕ ಸ್ವಭಾವದ ಎಲ್ಲಾ ಪರಿಪೂರ್ಣತೆಯು ಆತನ ದೇಹದಲ್ಲಿ ನೆಲೆಯಾಗಿದೆ. ಫಿಲಿಪ್ಪಿ 2:6; ಲೂಕ 2:11 ರ ವಾಕ್ಯಗಳನ್ನು ನೋಡಿರಿ. **10**

**2:10** ವಿಶ್ವಾಸಿಗಳು "ಕ್ರಿಸ್ತನಲ್ಲಿದ್ದಾರೆ", ದೇವರಾತ್ಮನ ಮೂಲಕ ಆತನೊಂದಿಗೆ ಐಕ್ಯರಾಗಿದ್ದಾರೆ – ಯೋಹಾನ 17:20-23; ರೋಮಾ 6:5; 1 ಕೊರಿಂಥ 12:12-13; ಎಫೆ 1:4,7,11,13. ಆದ್ದರಿಂದ ಪರಿಶುದ್ಧವಾದ, ಜ್ಞಾನವುಳ್ಳ ಆತ್ಮೀಕ ಜೀವಿತಕ್ಕೆ ಏನೆಲ್ಲಾ ಬೇಕು ಅವೆಲ್ಲವುಗಳನ್ನು ಆತನಲ್ಲಿ ಅವರು ಹೊಂದುವವರಾಗಿದ್ದಾರೆ. ದೇವರು ಅವರಿಗೆ ಕೊಟ್ಟಿರುವ "ಪರಿಪೂರ್ಣತೆಯು" ಖಂಡಿತವಗಿ, ಪೂರ್ಣವಾದ ದೈವೀಕತೆಯಲ್ಲ. ಮಾನವರಿಗೆ ದೇವರಾಗಲು ಮತ್ತು ದೇವರ ಎಲ್ಲಾ ಗುಣಲಕ್ಷಣಗಳನ್ನು ಹೊಂದಿಕೊಳ್ಳಲು ಎಂದಿಗೂ ಆಗುವದಿಲ್ಲ (ಆದಿ 1:26; ಕೀರ್ತನೆ 9:20; ಯೆಶಾಯ 40:6-8,12-26 ನೋಡಿರಿ). ಆದರೆ ದೇವರು ವಿಶ್ವಾಸಿಗಳಿಗೆ ಕ್ರಿಸ್ತನಲ್ಲಿ ಪೂರ್ಣವಾದ ಕೃಪೆ, ಶಕ್ತಿ ಹಾಗು ಜ್ಞಾನವನ್ನು

ಕೊಟ್ಟಿದ್ದಾನೆ. ಅವರು ಇದನ್ನು ಅರ್ಥಮಾಡಿಕೊಳ್ಳಬೇಕು ಮತ್ತು ತಮ್ಮ ಜೀವಿತಗಳಿಗೆ ಅಳವಡಿಸಿಕೊಳ್ಳಬೇಕು ಹಾಗೂ ಉಪಯೋಗಿಸಿಕೊಳ್ಳಬೇಕು. ಯೋಹಾನ 1:16-18; ಎಫೆ 3:19; 5:18 ರೊಂದಿಗೆ ಹೋಲಿಸಿ ನೋಡಿರಿ.

*"ಶಿರಸ್ಸು"*– ಎಫೆ 1:20-23; ಫಿಲಿಪ್ಪಿ 2:9-11. **11**

**2:11** *"ಸುನ್ನತಿ"*– ಸುನ್ನತಿಯು ವ್ಯಕ್ತಪಡಿಸುವ ಧಾರ್ಮಿಕ ಸಂಪ್ರದಾಯದ ನಿಜವಾದ ಆತ್ಮೀಕ ಅರ್ಥದ ಬಗ್ಗೆ ಪೌಲನು ಮಾತನಾಡುತ್ತಾ ಇದ್ದಾನೆ. ರೋಮಾ 2:28-29; ಫಿಲಿಪ್ಪಿ 3:3 ನೋಡಿರಿ. ಶರೀರವನ್ನು (ಗ್ರೀಕ್ ನಲ್ಲಿ "ಸಾರ್ಕ್ಸ್" – ರೋಮಾ 7:5 ರ ನೋಟ್ ನೋಡಿರಿ) ಯಾವ ವಿಧದಲ್ಲಿಯೂ ಅಭಿವೃದ್ಧಿಪಡಿಸಲು ಆಗುವದಿಲ್ಲ. ಅದು ಸಾಯಲೇಬೇಕು, ಯೇಸು ಕ್ರಿಸ್ತನು ನಮ್ಮ ಸ್ಥಾನದಲ್ಲಿ ಸಾಯುವ ಮೂಲಕ ಅದನ್ನು ಮರಣಕ್ಕೆ ಒಪ್ಪಿಸಿದ್ದಾನೆ. ಅದರೊಂದಿಗೆ ವಿಶ್ವಾಸಿಗಳಿಗೆ ಯಾವುದೇ ಸಂಬಂಧವಿಲ್ಲದ ಹಾಗೆ ಆತನು ಮಾಡಿದ್ದಾನೆ – 3:3; ರೋಮಾ 6:6; 7:17; 8:9. ಅವರಿಗೆ ಹೊಸ ಹೃದಯ, ಹೊಸ ಸ್ವಭಾವ ದೊರೆಯುತ್ತದೆ; ಅವರು ಹಳೆಯ ಜೀವನದಿಂದ ಬೇರ್ಪಡುತ್ತಾರೆ – 3:9-10; 2 ಕೊರಿಂಥ 5:17. ಇದರ ಅರ್ಥ ಹುಟ್ಟಿನಿಂದ ಅವರೊಳಗೆ ಬಂದಿರುವ ಪಾಪದ ಸ್ವಭಾವವು ನಿಷ್ಕ್ರಿಯವಾಗಿ ಎಂಬದಾಗಿಯಲ್ಲ – ರೋಮಾ 7:17-18; ಗಲಾ 5:17. **12**

**2:12** *"ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಂದಿಗೆ ಹೂಣಲ್ಪಟ್ಟಿದ್ದೇವೆ"*– ರೋಮಾ 6:3-4 ನೋಡಿರಿ.

*"ಆತನೊಂದಿಗೆ ಎದ್ದು ಬಂದಿದ್ದೇವೆ"*– ಎಫೆ 2:6.

*"ದೇವರ ಕಾರ್ಯದಲ್ಲಿ ನಂಬಿಕೆಯನ್ನಿಡುವ ಮೂಲಕ"*– ರೋಮಾ 4:20-21,24 ರೊಂದಿಗೆ ಹೋಲಿಸಿ ನೋಡಿರಿ. ಯೇಸು ಕ್ರಿಸ್ತನನ್ನು ಶಾರೀರಿಕ ಮರಣದಿಂದ ಎಬ್ಬಿಸುವ ಮೂಲಕ ತನ್ನ ಶಕ್ತಿಯನ್ನು ಪ್ರಕಟಿಸಿದ ದೇವರನ್ನು ನಾವು ನಂಬುವಾಗ, ಆತನು ನಮ್ಮನ್ನೂ ಆತ್ಮೀಕ ಮರಣದಿಂದ ಎಬ್ಬಿಸುತ್ತಾನೆ. ಯೋಹಾನ 5:24; ರೋಮಾ 10:9-10 ರೊಂದಿಗೆ ಹೋಲಿಸಿ ನೋಡಿರಿ. **13**

**2:13** *"ಸತ್ತವರಾಗಿದ್ದ . . . ಬದುಕಿಸಿದ್ದಾನೆ"*– ಎಫೆ 2:1,5. **14**

**2:14** – ಎಫೆ 2:15.

*"ಕ್ಷಮಿಸಿ"*– 1:14; ಎಫೆ 1:7.

*"ನಮ್ಮ ಮೇಲೆ ದೋಷಾರೋಪಣೆ"*– ದೇವರ ಧರ್ಮಶಾಸ್ತ್ರವು ಜನರಿಗೆ ವಿರುದ್ಧವಾಗಿತ್ತು

ಯಾಕಂದರೆ ಎಲ್ಲರೂ ಪಾಪಿಗಳಾಗಿದ್ದಾರೆ ಮತ್ತು ಅದನ್ನು ಉಲ್ಲಂಘಿಸಿದ್ದಾರೆ, ಆದ್ದರಿಂದ ಧರ್ಮಶಾಸ್ತ್ರವು ಶಿಕ್ಷೆ ಹಾಗೂ ಮರಣವನ್ನು ವಿಧಿಸುವದಾಗಿತ್ತು – ಗಲಾ 3:10; ರೋಮಾ 3:19; 4:15; 7:12-14.

*"ಶಿಲುಬೆಗೆ ಜಡಿದು"*– ಯೇಸು ಕ್ರಿಸ್ತನು ನಮ್ಮ ಸ್ಥಾನವನ್ನು ತೆಗೆದುಕೊಂಡನು ಮತ್ತು ಪಾಪಕ್ಕೆ ವಿರುದ್ಧವಾಗಿ ಧರ್ಮಶಾಸ್ತ್ರವು ವಿಧಿಸುವ ಎಲ್ಲಾ ಶಿಕ್ಷೆ ಮತ್ತು ಶಾಪವನ್ನು ಅನುಭವಿಸಿದನು – ಗಲಾ 3:13. ಆತನು ಧರ್ಮಶಾಸ್ತ್ರದ ಶಾಪದ ಅಡಿಯಲ್ಲಿ ಸತ್ತುಹೋದನು ಮತ್ತು ವಿಶ್ವಾಸಿಗಳೆಲ್ಲರೂ ಆತನೊಂದಿಗೆ ಸತ್ತು ಹೋದರು (ದೇವರ ದೃಷ್ಟಿಗೆ). ಅವರು ಧರ್ಮಶಾಸ್ತ್ರದ ಪಾಲಿಗೆ ಸತ್ತವರಾದ ಕಾರಣ, ಧರ್ಮಶಾಸ್ತ್ರವು ಸಹ ಅವರ ಪಾಲಿಗೆ ಶಿಲುಬೆಗೆ ಹಾಕಲ್ಪಟ್ಟಿದೆ ಹಾಗೂ ಸತ್ತು ಹೋಗಿದೆ – ರೋಮಾ 7:1-6. **15**

**2:15** *"ದೊರೆತನಗಳು ಅಧಿಕಾರಗಳು"*– ಸೈತಾನನು ಮತ್ತು ಇತರೆ ದುಷ್ಟ ಶಕ್ತಿಗಳು ಎಂಬದು ಪೌಲನ ಮಾತಿನ ಅರ್ಥವಾಗಿದೆ (ಎಫೆ 6:12). ಶಿಲುಬೆಯ ಮೂಲಕ ಇವುಗಳು ಯೇಸು ಕ್ರಿಸ್ತನನ್ನು ನಾಶಮಾಡಲು ಪ್ರಯತ್ನಿಸಿದವು – ಲೂಕ 22:53. ಆದರೆ ಯೇಸು ಕ್ರಿಸ್ತನು ತನ್ನ ಶಿಲುಬೆ ಮತ್ತು ಪುನರುತ್ಥಾನದ ಮೂಲಕ ಅವುಗಳ ಮೇಲೆ ಜಯ ಹೊಂದಿದನು ಮತ್ತು ತನ್ನ ಜನರನ್ನು ಅವುಗಳ ಬಂಧನದಿಂದ ಬಿಡಿಸಿದನು – ಯೋಹಾನ 12:31; ಇಬ್ರಿ 2:14-15.
**16-23**

**2:16-23** ಸುಳ್ಳು ಬೋಧಕರು ತಮ್ಮ "ರಂಜನೆಯ ಮಾತುಗಳ" (ವ 4) ಮೂಲಕ ಕೊಲೊಸ್ಸೆಯವರನ್ನು ವಂಚಿಸಲು ಪ್ರಯತ್ನಿಸಿದ ಕೆಲವು ವಿಧಾನಗಳ ಬಗ್ಗೆ ಪೌಲನು ಈಗ ಮಾತನಾಡುತ್ತಾ ಇದ್ದಾನೆ. **16**

**2:16** *"ಯಾರೂ"*– ಇಲ್ಲಿ ಅವನು ಇನ್ನೂ "ಆಜ್ಞಾರೂಪವಾಗಿದ್ದ ಪತ್ರ" –(ಮೋಶೆಯ ಧರ್ಮಶಾಸ್ತ್ರ) ವ 14 ಅನುಸರಿಸುವವರಾಗಿದ್ದ ಯೆಹೂದ್ಯರನ್ನು ಸೂಚಿಸುತ್ತಾ ಇದ್ದಾನೆ.

*"ತಿಂದು ಕುಡಿಯುವದು"*– ಯಾಜಕ 11:1; ಮಾರ್ಕ 7:18-19; ಅಪೊ 10:9-16; ರೋಮಾ 14:1-4 ರ ನೋಟ್ ನೋಡಿರಿ.

*"ಹಬ್ಬ"*– ಅವನ ಮಾತಿನ ಅರ್ಥ ಯೆಹೂದ್ಯರು ಆಚರಿಸುತ್ತಾ ಇದ್ದ ವಿಶೇಷ ದಿನಗಳು ಮತ್ತು ಕಾಲಗಳಾಗಿವೆ. ವಿಶ್ವಾಸಿಗಳು ಈಗ ಹಳೆಯ ಒಡಂಬಡಿಕೆಯ ಅಂಥ ನಿಯಮಗಳಿಗೆ ಅಧೀನರಾಗಿಲ್ಲ. ರೋಮಾ 14:5-8; ಗಲಾ 4:10-11 ರಲ್ಲಿ "ಸಬ್ಬತ್" ಕುರಿತಾದ ನೋಟ್ ನೋಡಿರಿ. ಈ ನಿಯಮಗಳು ಆಜ್ಞಾರೂಪವಾಗಿದ್ದ ಪತ್ರದ ಭಾಗವಾಗಿವೆ ಆದರೆ ಯೇಸು ಕ್ರಿಸ್ತನು ಅವುಗಳನ್ನು ಶಿಲುಬೆಗೆ ಜಡಿದಿದ್ದಾನೆ – ವ 14. **17**

**2:17** *“ಛಾಯೆ”*– ಇಬ್ರಿ 8:5; 10:1.

*“ಕಾರ್ಯಗಳು”*– ಹಳೆಯ ಒಡಂಬಡಿಕೆಯ ವಿಧಿಗಳು ಮತ್ತು ನಿಯಮಗಳು ಕ್ರಿಸ್ತನಲ್ಲಿ ದೊರೆಯುವ ಆತ್ಮೀಕ ಸತ್ಯಗಳ ಛಾಯಾಚಿತ್ರಗಳಾಗಿವೆ. **18**

**2:18** ಪೌಲನು ಈಗ ಮತ್ತೊಂದು ಅಪಾಯದ ಬಗ್ಗೆ ಮಾತನಾಡಿದ್ದಾನೆ. ಕೊಲೊಸ್ಸೆಯಲ್ಲಿದ್ದ ಕೆಲವರು ತಪ್ಪಾದ ಧಾರ್ಮಿಕ ಹಾದಿಯಲ್ಲಿದ್ದರು. ಅವರು ಯಾವುದನ್ನು ತಮ್ಮ ದೀನತೆ ಎಂದು ಹೇಳುತ್ತಾ ಇದ್ದರೋ ಅದರ ವಿಷಯದಲ್ಲಿ ಗರ್ವಿಷ್ಠರಾಗಿದ್ದರು ಮತ್ತು ದೇವದೂತರನ್ನು ಆರಾಧನೆ ಮಾಡುತ್ತಾ ಇದ್ದರು. ಈ ಆರಾಧನೆ ಮತ್ತು ಅವರು ಕರೆದುಕೊಳ್ಳುತ್ತಾ ಇದ್ದ ದೀನತೆ ಜೊತೆಜೊತೆಯಾಗಿ ಸಾಗುತ್ತಾ ಇದ್ದವು. ಅವರು ಬಹುಶಃ ಈ ರೀತಿ ವಾದ ಮಾಡುತ್ತಾ ಇದ್ದರು: ಮಾನವರು ನೇರವಾಗಿ ದೇವರ ಬಳಿಗೆ ಹೋಗಲಾರರು – ಆತನು ಅವರಿಗಿಂತ ಬಹಳ ಉನ್ನತದಲ್ಲಿದ್ದಾನೆ, ಬಹಳ ಮೇಲಿದ್ದಾನೆ, ಆತನನ್ನು ತಲುಪಲು ಆಗುವದಿಲ್ಲ; ಆದ್ದರಿಂದ ಮಾನವರು ಮಧ್ಯವರ್ತಿಗಳ ಮೂಲಕ ಮಾತ್ರವೇ ಆತನನ್ನು ಆರಾಧನೆ ಮಾಡಬೇಕು, ದೇವದೂತರೇ ಆ ಮಧ್ಯವರ್ತಿಗಳಾಗಿದ್ದಾರೆ. ಕೆಲವು ಧಾರ್ಮಿಕ ಜನರು ಇಂದು ಅದೇ ವಾದವನ್ನು ಮಂಡಿಸುತ್ತಾರೆ. ಆದರೆ ದೇವದೂತರನ್ನು ಅಥವಾ ದೇವದೂತರ ಮೂಲಕ ಆರಾಧನೆ ಮಾಡುವ ಬದಲು ಅವರು “ದೇವಜನರೆಂದು” ಕರೆಯುವ ಮೃತಪಟ್ಟವರನ್ನು ಗೌರವಿಸುತ್ತಾರೆ. ಅವರು ಅವರನ್ನು ಮಧ್ಯವರ್ತಿಗಳೆಂದು ಪರಿಗಣಿಸುತ್ತಾರೆ ಮತ್ತು ತಮ್ಮ ಪರವಾಗಿ ದೇವರನ್ನು ಬೇಡಿಕೊಳ್ಳುವಂತೆ ಅವರಿಗೆ ಮನವಿ ಮಾಡಿಕೊಳ್ಳುತ್ತಾರೆ. ಇದಲ್ಲದೆ ಸೃಷ್ಟಿಕರ್ತನಾದ ವಿವಿಧ “ದೇವರುಗಳನ್ನು” ಆರಾಧಿಸುವ ಇನ್ನೂ ಅನೇಕ ಜನರಿದ್ದಾರೆ. ಇದೆಲ್ಲವೂ ದೇವರ ವಾಕ್ಯಗಳಿಗೆ ಹಾಗೂ ಸತ್ಯವೇದದಲ್ಲಿ ಪ್ರಕಟಿಸಲಾಗಿರುವ ಆತನ ಚಿತ್ತಕ್ಕೆ ವಿರುದ್ಧವಾದ ಕಾರ್ಯಗಳಾಗಿವೆ – ವಿಮೋ 20:1-6; ಯೋಹಾನ 14:6; 1 ತಿಮೊ 2:5; ಇಬ್ರಿ 10:19-22.

*“ಬಿರುದು”*– 1 ಕೊರಿಂಥ 9:24; 2 ತಿಮೊ 2:5 ನೋಡಿರಿ. ವಿಶ್ವಾಸಿಗಳು ತಾವು ಓಡುತ್ತಿರುವ ಆತ್ಮೀಕ ಓಟದಲ್ಲಿ ಬೀಳುವಂತೆ ಮಾಡಲು ಯಾರಿಗೂ ಅವಕಾಶ ಕೊಡಬಾರದು. ಒಂದುವೇಳೆ ಅವರು ಅವಕಾಶ ಕೊಟ್ಟರೆ ಬಿರುದು ಕಳೆದುಕೊಳ್ಳುತ್ತಾರೆ ಮತ್ತು ಬಿರುದು ಪಡೆಯುವ ಅವಕಾಶವನ್ನು ತಪ್ಪಿಸಿಕೊಳ್ಳುತ್ತಾರೆ.

*“ಅತಿ ವಿನಯ”*– ಪವಿತ್ರಾತ್ಮನು ವಿಶ್ವಾಸಿಗಳಲ್ಲಿ ಉಂಟುಮಾಡುವಂಥ ವಿನಯವಲ್ಲ.

*“ಉಬ್ಬಿಕೊಳ್ಳುವದು”*– ಇದು ಅತಿ ವಿನಯದ ಫಲಿತಾಂಶವಾಗಿದೆ. ಅಂಥ ವಿನಯವು ನಾಶನವನ್ನುಂಟು ಮಾಡುವ ಗರ್ವವಾಗಿದೆ.

*"ಪ್ರಾಪಂಚಿಕ ಬುದ್ಧಿ"*– ಶರೀರ, ಅವಿಧೇಯ ಸ್ವಭಾವದ ಬುದ್ದಿ – ರೋಮಾ 8:5-7 ನೋಡಿರಿ. ಇಲ್ಲಿ ವಿವರಿಸಲಾಗಿರುವ ಜನರು ತಮ್ಮ ಪಾಪಸ್ವಭಾವದ ನಿಯಂತ್ರಣದಲ್ಲಿದ್ದಾರೆ ಮತ್ತು ಅವರ ಆರಾಧನೆ, ಧರ್ಮ ಮತ್ತು ತತ್ವಜ್ಞಾನ ಅದರಿಂದಲೇ ಬಂದದ್ದಾಗಿದೆ, ಆದರೆ ಅವರು ತಮ್ಮನ್ನು ಬಹಳ ಆತ್ಮೀಕರೆಂದು ಅಂದುಕೊಂಡಿದ್ದಾರೆ. **19**

**2:19** *"ಶಿರಸ್ಸಿನ ಹೊಂದಿಕೆಯನ್ನು ಬಿಟ್ಟವರಾಗಿದ್ದಾರೆ"*– NIV ಯಲ್ಲಿ ಇದನ್ನು "ಶಿರಸ್ಸಿನೊಂದಿಗೆ ಸಂಪರ್ಕವನ್ನು ಕಳೆದುಕೊಂಡಿದ್ದಾರೆ" ಎಂದು ಭಾಷಾಂತರ ಮಾಡಲಾಗಿದೆ. ಇದು ಅನಾವಶ್ಯಕ ಹಾಗು ದಾರಿ ತಪ್ಪಿಸುವ ಭಾಷಾಂತರವಾಗಿದೆ. ಇದು ಸೂಚಿಸುವದೇನೆಂದರೆ ಸುಳ್ಳು ಬೋಧಕರು ಒಮ್ಮೆ ಶಿರಸ್ಸಿಗೆ (ಕ್ರಿಸ್ತನಿಗೆ) ಹೊಂದಿಕೆಯಾಗಿದ್ದರು, ಆದರೆ ಹೇಗೋ ಹೊಂದಿಕೆಯನ್ನು ಬಿಟ್ಟಿದ್ದಾರೆ. ಈ ನೋಟ್ಸ್ ಗಳ ಬರಹಗಾರರಿಗೆ ಇದು ಯುಕ್ತ ಎಂಬದಾಗಿ ಅನ್ನಿಸುತ್ತಾ ಇಲ್ಲ. ಈ ವಾಕ್ಯವನ್ನು ಬಹುಶಃ "ಶಿರಸ್ಸಿನೊಂದಿಗೆ ಹೊಂದಿಕೆಯಾಗಿಲ್ಲ" ಅಥವಾ "ಶಿರಸ್ಸಿನ ಐಕ್ಯತೆಯಲ್ಲಿ ಇಲ್ಲ" –(ಯೆರೂಸಲೇಮ್ ಬೈಬಲ್) ಎಂಬದಾಗಿ ಭಾಷಾಂತರ ಮಾಡಬೇಕಾಗಿದೆ. ಕೊಲೊಸ್ಸೆಯಲ್ಲಿದ್ದ ಸುಳ್ಳು ಧಾರ್ಮಿಕ ಬೋಧಕರು ಕ್ರಿಸ್ತನ ನಿಯಂತ್ರಣದಲ್ಲಿ ಇರಲಿಲ್ಲ. ಆತನ ಬೋಧನೆ ಅವರ ಜೀವಿತಗಳ ಮೇಲೆ ಆಳ್ವಿಕೆ ಮಾಡುತ್ತಾ ಇರಲಿಲ್ಲ. ಈ ಕಾರಣದಿಂದಲೇ ಅವರು ದಾರಿ ತಪ್ಪಿದ್ದರು. ಬಹುಶಃ ಅವರು ನಾವು ಕ್ರಿಸ್ತನ ಹಿಂಬಾಲಕರು ಎಂದು ಹೇಳಿಕೊಳ್ಳುತ್ತಾ ಇದ್ದರು, ಆದರೆ ತಮ್ಮ ಬೋಧನೆಗಳಿಂದ ಆತನ ಹಿಂಬಾಲಕರಲ್ಲ ಎಂದು ನಿರೂಪಿಸುತ್ತಾ ಇದ್ದರು.

*"ಅಭಿವೃದ್ಧಿ"*– ಎಫೆ 4:16. **20**

**2:20** *"ಕ್ರಿಸ್ತನೊಂದಿಗೆ ಸತ್ತವರು"*– ರೋಮಾ 6:6,8; ಗಲಾ 2:20. "ಮನುಷ್ಯಕಲ್ಪಿತ ಆಜ್ಞೆಗಳು" (ವ 8; ಗಲಾ 4:3) – ಕ್ರಿಸ್ತನಲ್ಲಿರುವ ಹೊಸ ಆತ್ಮೀಕ ಸೃಷ್ಟಿಗೆ ಸಂಬಂಧಿಸದೆ ಹಳೆಯ ಸೃಷ್ಟಿಗೆ ಸಂಬಂಧಿಸಿರುವ ಕಾರ್ಯಗಳು. **21-22**

**2:21-22** ಕೆಲವರು ಆಗ (ಮತ್ತು ಈಗ) ಆಲೋಚಿಸುವದೇನೆಂದರೆ ತಿನ್ನುವದು, ಕುಡಿಯುವದು ಇತ್ಯಾದಿ ವಿಷಯಗಳ ಕುರಿತಾದ ನಿಯಮಗಳು ಹಾಗು ವಿಧಿಗಳು ಆತ್ಮೀಕ ಜೀವಿತದ ಪ್ರಮುಖ ಭಾಗವಾಗಿವೆ. ಕ್ರಿಸ್ತನಲ್ಲಿ ಜೀವಿಸುವ ವಿಶ್ವಾಸಿಗಳು ಕ್ರಿಸ್ತನಲ್ಲಿ ಅವೆಲ್ಲವುಗಳ ಪಾಲಿಗೆ ಸತ್ತಿದ್ದಾರೆ. **23**

**2:23** *"ನಾಮಧೇಯ ಜ್ಞಾನ"*– ಭೂಲೋಕದಲ್ಲಿರುವ ಬಹುತೇಕ ಜನರನ್ನು ತೃಪ್ತಿಪಡಿಸಲು ಇದು ಸಾಕು. ದೇವರಿಂದ ದೊರಕುವ ನಿಜವಾದ ಜ್ಞಾನ ಅವರಿಗೆ ಇಲ್ಲ, ಅದನ್ನು ಹೊಂದಲು ಅವರು ಪ್ರಯತ್ನಿಸುವದೂ ಇಲ್ಲ.

*"ಸ್ವ-ಆಯ್ಕೆಯ ಆರಾಧನೆ"*– ಬಹುತೇಕ ಜನರು ತಮ್ಮ ಸ್ವಂತ ಮಾರ್ಗದಲ್ಲಿ ಆರಾಧನೆ

ಮಾಡಲು ಪ್ರಯತ್ನಿಸುತ್ತಾರೆ ಮತ್ತು ದೇವರು ನೇಮಿಸಿರುವ ವಿಧಾನಗಳನ್ನು ತಿರಸ್ಕರಿಸುತ್ತಾರೆ. ಮತ್ತಾಯ 15:7-9; ಯೋಹಾನ 4:23-24; ವಿಮೋ 20:1-6; ಕೀರ್ತನೆ 29:2; ಜ್ಞಾನೋ 14:12 ರೊಂದಿಗೆ ಹೋಲಿಸಿ ನೋಡಿರಿ.

*"ಶಾರೀರಿಕ ಇಚ್ಛೆಗಳು"*– ದೇಹವನ್ನು ದಂಡಿಸಿಕೊಂಡರೆ ಮತ್ತು ಕೆಲವು ತಪಸ್ವೀ ಕಾರ್ಯಗಳಿಗೆ ವಿಧೇಯವಾಗುವಂತೆ ಮಾಡಿದರೆ ನಾವು ಆತ್ಮೀಕರಾಗಬಹುದು ಎಂದು ಕೆಲವರು ಅಂದುಕೊಂಡಿದ್ದಾರೆ. ದೇಹದ ಸ್ವನಿಯಂತ್ರಣ ಮತ್ತು ಅಧೀನತೆ ನಿಜವಾಗಿಯೂ ಒಳ್ಳೆಯದು (1 ಕೊರಿಂಥ 9:27). ಆದರೆ ಇದನ್ನು ಸಾಧಿಸಲು ಮಾನವರು ಅನುಸರಿಸುವ ಮಾರ್ಗಗಳೆಲ್ಲವೂ ಒಳ್ಳೆಯದಲ್ಲ. ಅದರೆ ಅವುಗಳು ಮಾತ್ರ ಅಥವಾ ಪೌಲನು ಇಲ್ಲಿ ತಿಳಿಸಿರುವ ವಿಷಯಗಳು ಮಾತ್ರ, ಯಾರನ್ನೂ ಆತ್ಮೀಕನನ್ನಾಗಿ ಅಥವಾ ತನ್ನ ಪಾಪದ ಸ್ವಭಾವವನ್ನು ಜಯಿಸುವವನನ್ನಾಗಿ ಮಾಡುವದಿಲ್ಲ. ಇದನ್ನು ಮಾಡಲು ಒಂದೇ ಒಂದು ಮಾರ್ಗವಿದೆ, ಅದು ಕರ್ತನಾದ ಯೇಸು ಕ್ರಿಸ್ತನ ಮೂಲಕ ಮಾತ್ರವೇ. ಪೌಲನು ಈ ವಿಷಯವನ್ನು ಮುಂದಿನ ಅಧ್ಯಾಯದಲ್ಲಿ ತಿಳಿಸಿದ್ದಾನೆ.

# 3 1-2

**3:1-2** *"ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟವರು"*– 2:13; ರೋಮಾ 6:4-5; ಎಫೆ 2:4-6. ವಿಶ್ವಾಸಿಗಳು ತಮ್ಮ ಪ್ರತಿನಿಧಿ ಮತ್ತು ಬದಲೀ ವ್ಯಕ್ತಿಯಾಗಿರುವ ಕ್ರಿಸ್ತನಲ್ಲಿ ಮೃತಪಟ್ಟಿದ್ದಾರೆ ಮತ್ತು ಆತನಲ್ಲಿಯೇ ಎಬ್ಬಿಸಲ್ಪಡುತ್ತಾರೆ. ಅವರು ಆತನನ್ನು ನಂಬಿಕೆಯಿಂದ ಅಂಗೀಕರಿಸಿಕೊಂಡಾಗ ಮತ್ತು ಹೊಸದಾಗಿ ಹುಟ್ಟಿದಾಗ ಇದು ಸಜೀವವಾದ ಅನುಭವವಾಗುತ್ತದೆ – ಯೋಹಾನ 1:12-13. ಯೇಸು ಕ್ರಿಸ್ತನು ತಂದೆಯ ಬಲಗಡೆಯಲ್ಲಿದ್ದಾನೆ – ಎಫೆ 1:20; ಫಿಲಿಪ್ಪಿ 2:9; ಇಬ್ರಿ 1:3. ಪ್ರತಿಯೊಬ್ಬ ವಿಶ್ವಾಸಿಯ ಆಲೋಚನೆಗಳು ಮತ್ತು ಬಯಕೆಗಳು ಅದರ ಮೇಲೆಯೇ ಇರಬೇಕು. ಆತನಿಗೆ ಯೋಗ್ಯವಾದ ಪರಿಶುದ್ಧ ಜೀವಿತವನ್ನು ಜೀವಿಸಲು ಇದೊಂದೇ ಮಾರ್ಗವಾಗಿದೆ. ಫಿಲಿಪ್ಪಿ 4:8; ರೋಮಾ 8:5 ರೊಂದಿಗೆ ಹೋಲಿಸಿ ನೋಡಿರಿ.

*"ಮೇಲಿನವುಗಳು"*– ಇವು ಯೇಸು ಕ್ರಿಸ್ತನ ಮತ್ತು ದೇವರ ಕಾರ್ಯಗಳು, ಆತ್ಮೀಕ ಕಾರ್ಯಗಳು, ದೇವರು ಪ್ರಕಟಿಸಿರುವ ಸತ್ಯ, ನಿಜವಾದ ಜ್ಞಾನ, ಆತನು ಯೇಸು ಕ್ರಿಸ್ತನಲ್ಲಿ ನಮಗೆ ಕೊಟ್ಟಿರುವ ಆಶೀರ್ವಾದಗಳು (ಎಫೆ 1:3). ನಾವು ನಮ್ಮ ಎಲ್ಲಾ ಆಲೋಚನೆಗಳು, ಬಯಕೆಗಳು ಮತ್ತು ಬಲದಿಂದ ಆ ಕಾರ್ಯಗಳನ್ನು ಹುಡುಕುವವರಾಗಿರಬೇಕು. ಸತತವಾದ ಸಮಾಧಾನ, ಸಂತೋಷ, ಭರವಸೆ, ಶಕ್ತಿ, ಪರಿಶುದ್ಧತೆ ಮತ್ತು ಕ್ರೈಸ್ತೀಯ ಜೀವಿತದ

ಬೆಳವಣಿಗೆಗೆ ಇದೊಂದೇ ಮಾರ್ಗವಾಗಿದೆ. **2**

**3:2** *“ಪ್ರೀತಿ”*– ಅಥವಾ “ಮನಸ್ಸು” –ಅಥವಾ ಎರಡೂ.

*“ಭೂಸಂಬಂಧವಾದವುಗಳು”*– ಫಿಲಿಪ್ಪಿ 3:19; 1 ಯೋಹಾನ 2:16-17. **3**

**3:3** *“ಸತ್ತಿರಲ್ಲಾ”*– ರೋಮಾ 6:2-4,8; ಗಲಾ 2:20.

*“ಜೀವ”*– ದೇವರು ವಿಶ್ವಾಸಿಗಳಿಗೆ ಕೊಟ್ಟಿರುವ ಹೊಸದಾದ, ಆತ್ಮೀಕ ಜೀವನ.

*“ಮರೆಯಾಗಿದೆ”*– ಭೂಲೋಕದಲ್ಲಿ ಯಾರಿಂದಲೂ ಅದನ್ನು ನೋಡಲು ಆಗುವದಿಲ್ಲ, ಅದನ್ನು ಹಾಳ ಮಾಡಲು ಯಾವ ವೈರಿಯೂ ಅದರ ಹತ್ತಿರಕ್ಕೆ ಬರಲಾಗುವದಿಲ್ಲ (ಯೋಹಾನ 10:28-29). ಯೇಸು ಕ್ರಿಸ್ತನಲ್ಲಿರುವ ಈ ನಿಕ್ಷೇಪವು ದೂರದಲ್ಲಿರುವಂತೆ ಅನ್ನಿಸಿದರೂ, ಅದು ಬಹಳ ಸಮೀಪದಲ್ಲಿದೆ ಮತ್ತು ಅತ್ಯಂತ ಸುರಕ್ಷಿತವಾಗಿದೆ. **4**

**3:4** ಯೇಸು ಕ್ರಿಸ್ತನು ಎಲ್ಲಾ ವಿಶ್ವಾಸಿಗಳ ಜೀವವಾಗಿದ್ದಾನೆ – ಅಂದರೆ, ಅವರು ಈ ಹೊಸದಾದ ಆತ್ಮೀಕ ಜೀವವನ್ನು ಹೊಂದಿದ್ದಾರೆ ಯಾಕಂದರೆ ಆತನು ಅವರಲ್ಲಿದ್ದಾನೆ (1:27; ಯೋಹಾನ 11:25; ರೋಮಾ 8:9-10; 1 ಯೋಹಾನ 5:11-12,20). ಅವರು ಆತನೊಂದಿಗೆ ಐಕ್ಯರಾಗಿದ್ದಾರೆ (ಯೋಹಾನ 17:20-23), ಮತ್ತು ಆತನ ಜೀವವು ವಿಶ್ವಾಸಿಗಳ ದೇಹದ ಮೂಲಕ ಹರಿಯುತ್ತದೆ.

*“ಪ್ರತ್ಯಕ್ಷತೆ”*– 1 ತಿಮೊ 6:14; 2 ತಿಮೊ 4:1,8; ತೀತ 2:13; ಇಬ್ರಿ 9:28; 1 ಪೇತ್ರ 5:4; 1 ಯೋಹಾನ 2:28; 3:2.

*“ಪ್ರಭಾವದಲ್ಲಿ”*– ಯೋಹಾನ 17:24; ರೋಮಾ 5:2; 8:17-18; 1 ಯೋಹಾನ 3:1-3. **5**

**3:5** *“ಸಾಯಿಸಿರಿ”*– ಪೌಲನು 1-4 ವಚನಗಳಲ್ಲಿ ನಮಗೆ ತಿಳಿಸಿರುವ ದೊಡ್ಡ ಸತ್ಯಗಳ ಆಧಾರದ ಮೇರೆಗೆ ಈ ಆಜ್ಞೆಗಳನ್ನು ಕೊಟ್ಟಿದ್ದಾನೆ. ರೋಮಾ 12:1; ಎಫೆ 4:1; 5:1 ರೊಂದಿಗೆ ಹೋಲಿಸಿ ನೋಡಿರಿ. ದೇವರು ವಿಶ್ವಾಸಿಗಳಿಗೆ ಯೇಸು ಕ್ರಿಸ್ತನಲ್ಲಿ ಹೊಸ ಜೀವವನ್ನು ಕೊಟ್ಟಿರುವದರಿಂದ, ಅವರಿಗೆ ಮಹಿಮಾರ್ಥವಾದ ಭವಿಷ್ಯ ಇರುವದರಿಂದ, ಅವರು ಅದಕ್ಕೆ ತಕ್ಕ ಹಾಗೆ ನಡೆದುಕೊಳ್ಳಬೇಕು. ಅವರು ತಮ್ಮ ಜೀವಿತಗಳಲ್ಲಿ ಪಾಪ ಮಾಡುವದನ್ನು ಬಿಟ್ಟು ಬಿಡಬೇಕು. ಇದು ಸಾಧ್ಯವಾದ ಕಾರ್ಯವಾಗಿದೆ (ಆದರೆ ನಾವು ನಮ್ಮೊಳಗಿರುವ ಪಾಪದ ಸ್ವಭಾವವನ್ನು ನಿರ್ಮೂಲ ಮಾಡಲು ಆಗುವದಿಲ್ಲ). ಒಂದುವೇಳೆ ಇದು ಸಾಧ್ಯವಿಲ್ಲವೆಂದರೆ, ಪೌಲನು ದೇವರಾತ್ಮನ ಪ್ರೇರಣೆಯ ಮೂಲಕ ಇದನ್ನು ಮಾಡಿರಿ ಎಂದು ವಿಶ್ವಾಸಿಗಳಿಗೆ ಹೇಳುತ್ತಾ ಇರಲಿಲ್ಲ. ಅವರು ಸುಳ್ಳು ಬೋಧಕರ ಯಾವುದೇ ವಿಧಾನಗಳ

ಮೂಲಕ ಇದನ್ನು ಮಾಡಲು ಆಗುವದಿಲ್ಲ (2:23). ಆದರೆ ಯೇಸು ಕ್ರಿಸ್ತನು, ಆತನ ಆತ್ಮನು ಕೊಡುವ ಶಕ್ತಿಯನ್ನು ಉಪಯೋಗಿಸುವ ಮೂಲಕ ಮಾಡಬಹುದು. ರೋಮಾ 8:4,13,14; ಗಲಾ 5:22-25; ಎಫೆ 3:16-20 ನೋಡಿರಿ.

*"ಸದಸ್ಯರು"*– ದೇಹದ ಭಾಗಗಳು. ಪೌಲನು ಈಗ ತಿಳಿಸುವ ಪಾಪಗಳು ನಮ್ಮ ಹುಟ್ಟಿನೊಂದಿಗೆ ಬರುವ ಕಣ್ಣುಗಳು, ಕೈಗಳು ಅಥವಾ ಕಾಲುಗಳು ದೇಹಕ್ಕೆ ಸೇರಿರುವದರಿಂದ ನಮ್ಮ ಸ್ವಭಾವಗಳಿಗೆ ಹತ್ತಿರದ ಸಂಬಂಧವುಳ್ಳವುಗಳಾಗಿವೆ. ಅವುಗಳೊಂದಿಗೆ ಗಂಭೀರವಾಗಿ, ಕ್ರಮವಾಗಿ ನಡೆದುಕೊಳ್ಳಬೇಕು. ಮತ್ತಾಯ 5:29-30 ನೋಡಿರಿ.

*"ದುರಾಸೆ"*– ಅಥವಾ "ಅತಿಆಸೆ", "ಅತಿಯಾಗಿ ಬಯಸುವದು" – ಈ ಪಾಪವು ಕ್ರೈಸ್ತರ ನಡುವೆಯೂ ಅತ್ಯಂತ ಸಾಮಾನ್ಯವಾದದ್ದಾಗಿದೆ.

*"ವಿಗ್ರಹಾರಾಧನೆ"*– ಎಫೆ 5:5. ಹೊರಗಿರುವ ವಿಗ್ರಹಗಳಂತೆಯೇ ಹೃದಯದಲ್ಲಿರುವ ವಿಗ್ರಹಗಳೂ ಅಸಹ್ಯ ಮತ್ತು ನಾಶಕರವಾಗಿವೆ. ಯೆಹೆಜ್ಕೇಲ 14:3-4 ನೋಡಿರಿ. **6**

**3:6** *"ಕೋಪ"*– ಎಫೆ 5:6; ರೋಮಾ 1:18; ಕೀರ್ತನೆ 90:7-11; ಸಂಖ್ಯಾ 25:3.

*"ಅವಿಧೇಯರಾದ ಮಕ್ಕಳು"*– ಇದರ ಅರ್ಥ ಅವಿಧೇಯರು, ಅವಿಧೇಯತೆಯಿಂದ ಕೂಡಿರುವ ಸ್ವಭಾವವುಳ್ಳವರು ಹಾಗೂ ಕಾರ್ಯಗಳನ್ನು ಮಾಡುವವರು. **7**

**- 3:7** ಎಫೆ 2:1-3; ರೋಮಾ 3:9-19. **8**

**3:8** *"ವಿಸರ್ಜನೆ"*– ಎಫೆ 4:22-32. **9**

**3:9** *"ಸುಳ್ಳಾಡಬೇಡಿರಿ"*– ಎಫೆ 4:25; ಕೀರ್ತನೆ 15:2; ಜ್ಞಾನೋ 12:22. **10**

**3:10** ಧರಿಸಿಕೊಳ್ಳಿರಿ – ಜನರು ಪಶ್ಚಾತ್ತಾಪಪಡುವಾಗ (ಮತ್ತಾಯ 3:2) ಮತ್ತು ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವಾಗ ಅವರು ಹಳೆಯ ಜೀವನ ಶೈಲಿಯನ್ನು ವಿಸರ್ಜಿಸಿ ಹೊಸದನ್ನು ಧರಿಸಿಕೊಳ್ಳುವವರಾಗಿದ್ದಾರೆ. ಅವರು ಹೊಸ ಸ್ವಭಾವವನ್ನು ಸಂಪಾದಿಸಿಕೊಳ್ಳುತ್ತಾರೆ, ಅವರು ನೂತನರಾಗುತ್ತಾರೆ – 2 ಕೊರಿಂಥ 5:17. ಆ ಹೊಸ ಸ್ವಭಾವವು ದೇವರ "ಸಾರೂಪ್ಯವಾಗಿದೆ" – ಅಂದರೆ ಅದು ಆತ್ಮೀಕವಾಗಿದೆ, ಪರಿಶುದ್ಧವಾಗಿದೆ ಮತ್ತು ನೀತಿಯುಳ್ಳದ್ದಾಗಿದೆ (ಎಫೆ 4:22-24). ಇದು ವಿಶ್ವಾಸಿಗಳೊಂದಿಗೆ ಅವರ ಪಾಪ ಸ್ವಭಾವದ ಜೊತೆಜೊತೆಯಲ್ಲಿ ಸಾಗುತ್ತದೆ – ಗಲಾ 5:16-17; ರೋಮಾ 7:14-25. ಆದ್ದರಿಂದ ಪ್ರತಿಯೊಬ್ಬ ವಿಶ್ವಾಸಿಯು ತನ್ನ ಹಳೆಯ ನಡತೆಯ ತಪ್ಪುಗಳು, ಪಾಪಗಳು, ಕೆಟ್ಟ ಅಭ್ಯಾಸಗಳು, ದುಷ್ಟ ಬಯಕೆಗಳು ಇತ್ಯಾದಿಗಳನ್ನು ಬಗೆಹರಿಸಿಕೊಳ್ಳಬೇಕು. ಅವುಗಳನ್ನು ಬಗೆಹರಿಸಿಕೊಳ್ಳಬೇಕೆಂದು ಸಂಪೂರ್ಣವಾಗಿ ವಿಸರ್ಜಿಸಬೇಕು ಹಾಗೂ ಸಾಯಿಸಬೇಕು. **11**

**3:11** ಗಲಾ 3:28. ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವವರೆಲ್ಲರು ಹೊಸ ಸ್ವಭಾವವನ್ನು ಹೊಂದುತ್ತಾರೆ ಮತ್ತು ಎಲ್ಲರೂ ಯೇಸು ಕ್ರಿಸ್ತನೊಂದಿಗೆ ಐಕ್ಯರಾಗಿರುತ್ತಾರೆ. ದೇವರು ಯಾವುದೇ ಭೇದ ಮಾಡದೆ ಇರುವಾಗ ಕ್ರೈಸ್ತರೂ ಮಾಡಬಾರದು. **12**

**3:12** “*ದೇವರಿಂದ ಆರಿಸಿಕೊಂಡವರು*”– 2 ಕೊರಿಂಥ 6:16-18; 1 ಪೇತ್ರ 2:9-10.

“*ಪರಿಶುದ್ಧರು*”– ಯೋಹಾನ 17:17-19 ರ ನೋಟ್ಸ್ ನೋಡಿರಿ.

“*ಪ್ರಿಯರು*”– ಎಫೆ 1:5; 3:18-19; 5:25-26; 1 ಯೋಹಾನ 3:1.

“*ಕನಿಕರ ದಯೆ. . . ದೀರ್ಘಶಾಂತಿ*”– ಫಿಲಿಪ್ಪಿ 2:1; ಗಲಾ 5:22-23. **13**

- **3:13** ಎಫೆ 4:32; ಮತ್ತಾಯ 6:12,14. **14**

**3:14** “*ಧರಿಸಿಕೊಳ್ಳಿರಿ*”– ಅಥವಾ “ಹಾಕಿಕೊಳ್ಳಿರಿ” – ರೋಮಾ 13:14.

“*ಎಲ್ಲಾದರ ಮೇಲೆ ಪ್ರೀತಿ*”– ಯೋಹಾನ 13:34; ರೋಮಾ 12:10; 1 ಕೊರಿಂಥ 13; ಎಫೆ 4:2; ಫಿಲಿಪ್ಪಿ 2:2; 1 ಯೋಹಾನ 3:18; 4:7-8. ಪ್ರೀತಿಯಿಂದ ಮಾತ್ರವೇ ವಿಶ್ವಾಸಿಗಳ ನಡುವೆ ಪರಿಪೂರ್ಣವಾದ ಐಕ್ಯತೆಯನ್ನು ನೆಲೆಗೊಳಿಸಲು ಸಾಧ್ಯ. ಪ್ರೀತಿಯಿಲ್ಲದೆ ಹೋದರೆ ಸ್ವಾರ್ಥಪರ ಆಕಾಂಕ್ಷೆ, ಜಗಳ, ಕಿತ್ತಾಟ ಇತ್ಯಾದಿಗಳು ಇರುತ್ತವೆ. **15**

**3:15** “*ದೇವರ ಸಮಾಧಾನ*”– ಯೋಹಾನ 14:27; ಫಿಲಿಪ್ಪಿ 4:6-7. ಸಮಾಧಾನವು ನಮ್ಮ ಹೃದಯಗಳ ಸಿಂಹಾಸನದ ಮೇಲೆ ಕೂರಬೇಕು ಮತ್ತು ನಮ್ಮ ಕ್ರಿಯೆಗಳಿಗೆ ಮಾರ್ಗದರ್ಶನವನ್ನು ಕೊಡಬೇಕು. ನಮ್ಮ ಆಂತರ್ಯದ ಸಮಾಧಾನಕ್ಕೆ ತೊಂದರೆ ಕೊಡುವ, ಸಮಾಧಾನವನ್ನು ವಿರೋಧಿಸುವ, ನಮ್ಮನ್ನು ಗೊಂದಲ ಹಾಗೂ ಗಾಬರಿಗಳಿಗೆ ಒಳಪಡಿಸುವ ಕಾರ್ಯಗಳನ್ನು ನಾವು ಎಂದಿಗೂ ಮಾಡಬಾರದು. ಹೃದಯದಲ್ಲಿರುವ ಸಮಾಧಾನವು ಕೋಮಲವಾದ ಹೂವಾಗಿದೆ, ಪಾಪವು ಅದು ಒಣಗುವಂತೆ ಮಾಡುತ್ತದೆ.

“*ಒಂದೇ ದೇಹ*”– 1 ಕೊರಿಂಥ 12:12-13. ಆದ್ದರಿಂದ ನಾವು ಒಬ್ಬರ ಸಂಗಡಲೊಬ್ಬರು ಇದರ ಬೆಳಕಿನ ಪ್ರಕಾರ ನಡೆದುಕೊಳ್ಳಬೇಕು – 1 ಕೊರಿಂಥ 1:10; ಫಿಲಿಪ್ಪಿ 2:2.

“*ಕೃತಜ್ಞತೆಯುಳ್ಳವರಾಗಿರುವದು*”– 1:12; 2:7. **16**

**3:16** ಎಫೆ 5:18-20 ರೊಂದಿಗೆ ಹೋಲಿಸಿ ನೋಡಿರಿ. ದೇವರಾತ್ಮಭರಿತರಾಗಿರುವದು ಮತ್ತು ಯೇಸು ಕ್ರಿಸ್ತನ ವಾಕ್ಯ (ಬೋಧನೆಗಳು) ನಮ್ಮ ಮನಸ್ಸು ಹಾಗೂ ಹೃದಯದಲ್ಲಿ ಸಮೃದ್ಧವಾಗಿ ನೆಲೆಸಲು ಅವಕಾಶ ಕೊಡುವದರ ನಡುವೆ ಬಹಳ ಹತ್ತಿರದ ಸಂಬಂಧವಿದೆ.

“*ವಾಸಿಸುವದು*”– ಎಫೆ 3:17; ಕೀರ್ತನೆ 119:11 ರೊಂದಿಗೆ ಹೋಲಿಸಿ ನೋಡಿರಿ. ದೇವರ ವಾಕ್ಯವು ವಿಶ್ವಾಸಿಗಳಿಗೆ ಎಷ್ಟು ಪ್ರಾಮುಖ್ಯವಾಗಿದೆ ಎಂಬದನ್ನು ಗಮನಿಸಿರಿ. ಕೀರ್ತನೆ 1:2;

ಧರ್ಮೋ 6:6-7; ಯೆಹೋ 1:8 ರೊಂದಿಗೆ ಹೋಲಿಸಿ ನೋಡಿರಿ.

*"ಉಪದೇಶಮಾಡಿಕೊಳ್ಳಿರಿ, ಬುದ್ಧಿ ಹೇಳಿಕೊಳ್ಳಿರಿ"*– ವಿಶ್ವಾಸಿಗಳೆಲ್ಲರೂ ಒಬ್ಬರಿಗೊಬ್ಬರು ಉಪದೇಶಕರಾಗಿರಬೇಕು. ಆದರೆ ಯೇಸು ಕ್ರಿಸ್ತನ ವಾಕ್ಯಗಳು ಅವರೊಳಗೆ ಸಮೃದ್ಧವಾಗಿ ವಾಸವಾಗಿದ್ದರೆ ಮಾತ್ರವೇ ಇದು ಸಾಧ್ಯವಾಗುತ್ತದೆ. **17**

**3:17** 1 ಕೊರಿಂಥ 10:31 ರೊಂದಿಗೆ ಹೋಲಿಸಿ ನೋಡಿರಿ.

*"ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ"*– ಆತನ ಸ್ವಭಾವ ಮತ್ತು ಬೋಧನೆಗಳ ಪ್ರಕಾರ, ಆತನ ಅಧಿಕಾರದ ಮೇಲೆ, ಭೂಲೋಕದಲ್ಲಿ ಆತನನ್ನು ಪ್ರತಿನಿಧಿಸುವವರಾಗಿ ಉಪಯೋಗಿಸಬೇಕು. ನಮ್ಮ ಪ್ರತಿಯೊಂದು ಕ್ರಿಯೆ ಮತ್ತು ಮಾತುಗಳ ಮೇಲೆ ಆಳ್ವಿಕೆ ಮಾಡಲು ಇಲ್ಲಿ ನಿಯಮವನ್ನು ಕೊಡಲಾಗಿದೆ. ಕರ್ತನಾದ ಯೇಸು ಕ್ರಿಸ್ತನ ಅಧಿಕಾರದಿಂದ ಒಂದುವೇಳೆ ನಮ್ಮಿಂದ ಏನೂ ಹೇಳಲು ಅಥವಾ ಮಾಡಲು ಆಗದೆ ಹೋದರೆ ನಾವು ಏನನ್ನೂ ಹೇಳಬಾರದು ಹಾಗು ಮಾಡಬಾರದು. ವಿಶ್ವಾಸಿಗಳು ಭೂಮಿಯ ಮೇಲಿರುವ ಆತನ ಜನರಾಗಿದ್ದಾರೆ, ಆತನ ದೇಹದ ಸದಸ್ಯರಾಗಿದ್ದಾರೆ. ಅವರು ಆತನನ್ನು ಲೋಕಕ್ಕೆ ಪರಿಚಯಪಡಿಸಬೇಕೇ ಹೊರತು ತಮಗೆ ಇಷ್ಟವಾಗುವ ರೀತಿಯಲ್ಲಿ ಮಾತನಾಡುವದು ಹಾಗೂ ನಡೆದುಕೊಳ್ಳುವದನ್ನು ಮಾಡಬಾರದು. **18**

**3:18** ಎಫೆ 5:22—6:8 ಮತ್ತು ನೋಟ್ಸ್ ನೋಡಿರಿ. **22**

**3:22** *"ದಾಸರು"*– ಅಥವಾ "ಸೇವಕರು" ಅಥವಾ "ದಾಸತ್ವದಲ್ಲಿರುವವರು".

# 4 1

- **4:1** ಎಫೆ 6:9. **2**
- **4:2** ಎಫೆ 6:18; ಲೂಕ 18:1.

*"ಕೃತಜ್ಞತಾಸ್ತುತಿ"*– 1:12; 2:7; 3:15,17; 1 ಥೆಸ 5:18. **3**

- **4:3** ಎಫೆ 6:19-20.

*"ಕ್ರಿಸ್ತನ ವಿಷಯದ ಸತ್ಯಾರ್ಥ"*– 1:25-27. ನಮ್ಮೆಲ್ಲರಿಗೂ ಮಾದರಿಯಾಗಿರುವ ಪೌಲನು, ಇತರರಿಗೆ ಯೇಸು ಕ್ರಿಸ್ತನ ಬಗ್ಗೆ ಹೇಳಲು ಅವಕಾಶ ದೊರೆಯುತ್ತದೆಯೇ ಎಂದು ಯಾವಾಗಲೂ ಎದುರುನೋಡುತ್ತಾ ಇದ್ದನು. ಅವನು ಅವಕಾಶಗಳಿಗಾಗಿ ಪ್ರಾರ್ಥನೆ ಮಾಡುತ್ತಾ ಇದ್ದನು ಮತ್ತು ತನಗಾಗಿ ಪ್ರಾರ್ಥನೆ ಮಾಡುವಂತೆ ಇತರರಿಗೆ ಹೇಳುತ್ತಾ ಇದ್ದನು. **4**

**4:4** *"ನಾನು ಅದನ್ನು ಹೇಳಬೇಕಾದ ರೀತಿಯಲ್ಲಿ"*– ನಮಗೆದುರಾಗುವ ವಿವಿಧ

ಪರಿಸ್ಥಿತಿಗಳಲ್ಲಿ ಮತ್ತು ನಾವು ಸಂಧಿಸುವ ವಿವಿಧ ಬಗೆಯ ಜನರೊಂದಿಗೆ, ಸಹಜವಾಗಿ ನಾವು ಮಾತನಾಡಬೇಕಾದ ರೀತಿಯಲ್ಲಿ ಮಾತನಾಡುವದು ಸುಲಭವಲ್ಲ. ಎಲ್ಲಾ ರೀತಿಯ ವ್ಯಕ್ತಿಗಳೊಂದಿಗೆ, ಎಲ್ಲಾ ರೀತಿಯ ಪರಿಸ್ಥಿತಿಗಳಲ್ಲಿಯೂ ಮಾತನಾಡಲು ಸಿದ್ಧರಾಗಿರಲು ಹೆಚ್ಚು ಪ್ರಾರ್ಥನೆ, ಆಲೋಚನೆ ಹಾಗೂ ಅಧ್ಯಯನ ಮಾಡಬೇಕು. **5**

**4:5** ವಿಶ್ವಾಸಿಗಳು ಯಾವಾಗಲೂ ನಮ್ಮ ಮಾತುಗಳು ಹಾಗೂ ಕ್ರಿಯೆಗಳು ಅವಿಶ್ವಾಸಿಗಳ ಮೇಲೆ ಎಂಥ ಪ್ರಭಾವ ಬೀರುತ್ತವೆ ಎಂಬದರ ಬಗ್ಗೆ ಯೋಚಿಸುತ್ತಾ ಇರಬೇಕು. ಹೊರಗಿನವರಿಗೆ ನಮ್ಮಲ್ಲಿ ಕಾಣಿಸುವ ಅಥವಾ ನಮ್ಮಲ್ಲಿ ನೋಡುವ ವಿಷಯಗಳಿಗಿಂತ ಹೆಚ್ಚು ಕ್ರೈಸ್ತತ್ವದ ಬಗ್ಗೆ ಏನೂ ಗೊತ್ತಿರದೆ ಇರಬಹುದು. ಒಂದುವೇಳೆ ನಾವು ಬುದ್ಧಿವಂತರಲ್ಲದೆ ಹೋದರೆ ಅನಾವಶ್ಯಕವಾಗಿ ಅವರಿಗೆ ತೊಂದರೆ ಮಾಡುತ್ತೇವೆ. ಯೇಸು ಕ್ರಿಸ್ತನ ಬಗ್ಗೆ ಅವರಿಗೆ ತಿಳಿಸುವ ಅವಕಾಶಗಳನ್ನು ದೇವರು ಒದಗಿಸುವಾಗ ನಾವು ಅವುಗಳನ್ನು ಸದುಪಯೋಗಪಡಿಸಿಕೊಳ್ಳಲಿಲ್ಲವೆಂದರೆ, ಅವರ ರಕ್ತಾಪರಾಧವು ನಮ್ಮ ಮೇಲೆ ಬರುತ್ತದೆ – ಅಪೊ 20:25-27. ನಾವು ಅವರ ಸಂಗಡ ಮಾತನಾಡುವಾಗ ಅವರೊಂದಿಗೆ ದಯೆಯುಳ್ಳವರಾಗಿ, ಸೌಜನ್ಯವುಳ್ಳವರಾಗಿ ಮತ್ತು ಯುಕ್ತವಾಗಿ ಮಾತನಾಡಬೇಕು. ಮತ್ತು ಅವರಿಗೆ ನಾವು ತಿಳಿಸುವ ಸಂದೇಶವು ಯಾವಾಗಲೂ ದೇವರ ಕೃಪೆಗೆ ಆದ್ಯತೆಯನ್ನು ಕೊಡುವದಾಗಿರಬೇಕು. ಕೀರ್ತನೆ 45:2; ಲೂಕ 4:22 ರೊಂದಿಗೆ ಹೋಲಿಸಿ ನೋಡಿರಿ. "ಉಪ್ಪು" ಎಂಬ ಪದ ಎರಡು ವಿಷಯಗಳನ್ನು ತಿಳಿಸುತ್ತದೆ. ಉಪ್ಪು ಪದಾರ್ಥಗಳನ್ನು ರುಚಿಯನ್ನಾಗಿಸುತ್ತದೆ. ನಾವು ಮಾತನಾಡುವಂಥ ರೀತಿ ಜನರು ಇನ್ನೂ ಕೇಳಿಸಿಕೊಳ್ಳಬೇಕು ಎಂದು ಬಯಸುವ ರೀತಿಯಲ್ಲಿರಬೇಕು. ಉಪ್ಪು ಪದಾರ್ಥಗಳು ಕೆಡದಂತೆ ನೋಡಿಕೊಳ್ಳುತ್ತದೆ. ಜನರ ನಡುವೆ ಹುದುವಾಗಿ ಮಾತನಾಡಲು ನಾವು ಕೆಟ್ಟ ಕಾರ್ಯಗಳನ್ನು ಹೊಂದಿಸಿಕೊಳ್ಳುವ ಅವಶ್ಯಕತೆಯಿಲ್ಲ. ಎಫೆ 4:29 ರೊಂದಿಗೆ ಹೋಲಿಸಿ ನೋಡಿರಿ. **7**

**4:7** "*ತುಖಿಕನು*"– ಎಫೆ 6:21. **8**

**4:8** "*ಸಂತೈಸುವಿಕೆ*"– 2:2. **9**

**4:9** "*ಒನೇಸಿಮನು*"– ಫಿಲೆ 10-12,16. **10**

**4:10** "*ಅರಿಸ್ತಾರ್ಕನು*"– ಅಪೊ 19:29; 20:4; 27:2; ಫಿಲೆ 24.

"*ಸೆರೆಯವನು*"– ವ 18; ಎಫೆ 3:1; ಫಿಲಿಪ್ಪಿ 1:13.

"*ಮಾರ್ಕ*"– ಅಪೊ 12:12,25; 13:5,13; 15:37,39; 2 ತಿಮೊ 4:11; ಫಿಲೆ 1:24; 1 ಪೇತ್ರ 5:13. **11**

**4:11** *"ಯೇಸು"*–ಯೆಹೋಶುವನ ಗ್ರೀಕ್ ರೂಪವಾಗಿದೆ ಮತ್ತು ಆಗಿನ ದಿನಗಳಲ್ಲಿ ಯೆಹೂದ್ಯರ ನಡುವೆ ಇದು ಸಾಮಾನ್ಯವಾದ ಹೆಸರಾಗಿತ್ತು.

*"ಸುನ್ನತಿಯವರೊಳಗೆ"*– ಅಥವಾ ಯೆಹೂದ್ಯರೊಳಗೆ. ಉಳಿದ ಅವನ ಜೊತೆಕೆಲಸದವರು ಬೇರೆ ಜನಾಂಗಗಳು ಅಥವಾ ಕುಲಗಳವರಾಗಿದ್ದರು.

*"ದೇವರ ರಾಜ್ಯ"*– ಮತ್ತಾಯ 4:17; ರೋಮಾ 14:17 ರ ನೋಟ್ಸ್ ನೋಡಿರಿ. **12**

**4:12** *"ಎಫಫ್ರನು"*– 1:7.

*"ಪ್ರಾರ್ಥನೆ ಮಾಡುವಾಗ ಹೋರಾಡುತ್ತಾನೆ"*– 2:1. ತನಗಾಗಿಯಲ್ಲ ಬದಲಾಗಿ ಇತರರಿಗಾಗಿ ಹೋರಾಡುತ್ತಿದ್ದನು. ಅವರಿಗಾಗಿ ಅವನು ಆತ್ಮೀಕ ಯುದ್ಧಗಳನ್ನು ಗೆಲ್ಲಬೇಕೆಂದಿದ್ದನು. ಶರೀರದ ಬಲಹೀನತೆ ಮತ್ತು ಆತ್ಮೀಕ ಲೋಕದಲ್ಲಿ ವೈರಿಗಳು ವಿರೋಧಗಳನ್ನು ಮಾಡುವದರಿಂದ ಆತ್ಮೀಕ ಹೋರಾಟ ಪ್ರಾಮುಖ್ಯವಾಗಿದೆ – ಮತ್ತಾಯ 26:40-41; ಎಫೆ 6:12. ಹಾಗೆಯೇ ಆದಿ 32:24-32 ರೊಂದಿಗೆ ಹೋಲಿಸಿ ನೋಡಿರಿ. ಎಫಪ್ರನು ಆ ವಿಶ್ವಾಸಿಗಳಿಗೆ ಅತ್ಯಂತ ಪ್ರಾಮುಖ್ಯವಾದ ವಿಷಯಗಳು ತಿಳಿಯಬೇಕೆಂದು ಬಯಸಿದನು – ಆ ವಿಷಯಗಳನ್ನು ವಿಶ್ವಾಸಿಗಳು ಇಂದಿಗೂ ತಿಳಿಯಬೇಕಾಗಿದೆ. ದೇವರ ಚಿತ್ತವೇನೆಂದು ಅವರು ತಿಳಿದುಕೊಳ್ಳಬೇಕು ಮತ್ತು ಅದರಲ್ಲಿ ದೃಢವಾಗಿ ನಿಲ್ಲಬೇಕು (1:9-10) ಹಾಗೂ ಆತ್ಮೀಕ ಪ್ರಬುದ್ಧತೆಯನ್ನು (ಎಫೆ 4:13-15) ಅವರು ಅನುಭವಿಸಬೇಕೆಂದು ಅವನು ಬಯಸಿದನು. "ಯಾವಾಗಲೂ" ಎಂಬ ಪದವನ್ನು ಗಮನಿಸಿರಿ. **13**

**4:13** *"ಲವೊದಿಕೀಯ"*– ವ 15,16; 2:1. **14**

**4:14** *"ಲೂಕ"*– ಫಿಲೆ 1:24; 2 ತಿಮೊ 4:11. ಲೂಕನು ಅನ್ಯನಾಗಿದ್ದನು (ವ 11 ರೊಂದಿಗೆ ಹೋಲಿಸಿ ನೋಡಿರಿ) ಮತ್ತು ಅಪೊಸ್ತಲರ ಕೃತ್ಯಗಳು ಹಾಗೂ ಲೂಕನ ಸುವಾರ್ತೆಯ ಗ್ರಂಥಕರ್ತನಾಗಿದ್ದಾನೆ. ಈ ಸ್ಥಳದಲ್ಲಿ ಮಾತ್ರವೇ ಅವನನ್ನು ವೈದ್ಯನೆಂದು ಕರೆಯಲಾಗಿದೆ.

*"ದೇಮನು"*– ಫಿಲೆ 1:24; 2 ತಿಮೊ 4:10. **15-16**

**4:15-16** ಪೌಲನ ಪತ್ರಿಕೆಗಳು (ಮತ್ತು ಸತ್ಯವೇದದ ಇತರೆ ಭಾಗಗಳು) ಸಭೆಗಳಿಗೆ ಪರಿಚಿತವಾದ ಮಾರ್ಗಗಳಲ್ಲಿ ಇದೂ ಒಂದಾಗಿದೆ. ಆಗಿನ ದಿನಗಳಲ್ಲಿ ಮುದ್ರಣಾಲಯಗಳು ಮತ್ತು ಯಾವುದೇ ರೀತಿಯ ಯಂತ್ರಗಳು ಇರಲಿಲ್ಲ ಎಂಬದನ್ನು ನೆನಪು ಮಾಡಿಕೊಳ್ಳಿರಿ. **17**

**4:17** *"ಅಖಿಪ್ಪ"*– ಫಿಲೆ 2. ದೇವರು ನನಗೆ ಕೊಟ್ಟಿರುವ ಕೆಲಸವನ್ನು ನಾನು ಮಾಡಿ ಮುಗಿಸಬೇಕು ಎಂಬದೇ ಪ್ರತಿಯೊಬ್ಬ ವಿಶ್ವಾಸಿಯ ಪ್ರಮುಖ ಯೋಚನೆಯಾಗಿರಬೇಕು. ಅಪೊ

20:24; 2 ತಿಮೊ 4:7 ನೋಡಿರಿ. **18**

**4:18** *“ಸ್ವಂತ ಕೈಯಿಂದ”*– 1 ಕೊರಿಂಥ 16:21; ಗಲಾ 6:11; 2 ಥೆಸ 3:17.

*“ಬೇಡಿಗಳು”*– ವ 10.